WPP No. SK/MNG/WPP/69 D.O.P - 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*
ಫೋನ್ : 2531493 (0), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ

ಮಾಸಪತ್ರಿಕೆ - 15 ನವಂಬರ್ 2011

॥ ಧಿಯೋ ಯೋನಃ ಪ್ರಚೋದಯಾತ್ ॥


Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102. ☏ 2520754


ಸಂಪುಟ-11 ಸಂಚಿಕೆ-11 ಪುಟಗಳು-10 Registered Under No.J/UDP/1260/2009-2011 Dated from 01-12-2008 to 31-12-2011


**ಮಂಗಳಗೌರೀ ವ್ರತ ಕಥಾಸಾರ**
- ವೈ. ಯಂ. ಶ್ರೀಧರ ರಾವ್
ಪುಟ-4

**ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಶೃಂಗೇರಿ ಶ್ರೀಶಾರದಾ ಪೀಠದ ಕೊಡುಗೆ**

ಡಾ| ಎಚ್.ವಿ.ನರಸಿಂಹಮೂರ್ತಿ
ಪುಟ-6



**ಯುರೋಪ್ ಪ್ರವಾಸ ಕಥನ**
ಮಹಾಲಕ್ಷ್ಮೀ ಶಾನುಭಾಗ್, ಅಂಬಲಪಾಡಿ
ಪುಟ-7


**ಕವನಗಳು**
ಶಂಕರನಾರಾಯಣ ಪೆರುವಾಜೆ, ಬೆಂಗಳೂರು
ಮಾರ್ಪಳ್ಳಿ ಆರ್.ಮಂಜುನಾಥ್, ಶಿವಮೊಗ್ಗ
Pragathi Bhandi, Perdoor
ವೈ. ಎ. ರಾವ್
ಪುಟ-8

## ಉಡುಪಿ ಕುಂಜಿಬೆಟ್ಟು : ಸೌಂದರ್ಯ ಲಹರಿ ಸಪ್ತಾಹ

ಜ್ಞಾನ ಭಾರತೀ (ರಿ.), ಉಡುಪಿ ಆಶ್ರಯದಲ್ಲಿ ಸ್ಥಾನಿಕ ಬ್ರಾಹ್ಮಣ ಸಂಘ ಹಾಗೂ ಹವ್ಯಕ ಸಭಾ, ಉಡುಪಿ ಸಹಯೋಗದಲ್ಲಿ ಜಗದ್ಗುರು ಶ್ರೀ ಶಂಕರಾಚಾರ್ಯ ವಿರಚಿತ ''ಸೌಂದರ್ಯ ಲಹರಿ ಸಪ್ತಾಹ 2011'' ಕಾರ್ಯಕ್ರಮವು ಇತ್ತೀಚೆಗೆ ಉಡುಪಿಯ ಶ್ರೀಶಾರದಾ ಮಂಟಪದಲ್ಲಿ ನೆರವೇರಿತು.


ಒಂದು ವಾರದ ಕಾಲ ಮಹಿಳೆಯರಿಂದ ಸೌಂದರ್ಯ ಲಹರಿಯ ಪಾರಾಯಣ, ಐದನೇ ದಿನದಂದು ಸುಧೀಂದ್ರ ತೀರ್ಥ ಮಾರ್ಗದಲ್ಲಿ ''ಶ್ರೀ ಶಂಕರ ನಾಮ ಪರಿಕ್ರಮಣ'', ಆರನೇ ದಿನದಂದು ದಿನಪೂರ್ತಿ ''ಅಖಂಡ ಪಾರಾಯಣ'' ಹಾಗೂ ಏಳನೇ ದಿನದಂದು ''ಸಮಾರೋಪ ಸಮಾರಂಭ''ವನ್ನು ಹಮ್ಮಿಕೊಳ್ಳಲಾಯಿತು.

ಸಮಾರೋಪದಂದು ಮುಖ್ಯ ಅತಿಥಿಗಳಾಗಿ ಮಾತೆ ಶ್ರೀಮತಿ ಉಮಾ ಅಡಿಗ, ಬಾರ್ಕೂರು ಅವರು ಶ್ಲೋಕದ ಪಾವಿತ್ರ್ಯತೆ, ಸೌಂದರ್ಯ ಲಹರಿ ಹಾಗೂ ಶ್ರೀಚಕ್ರದ ಸಂಬಂಧ, ಮಾನವ ದೇಹದಲ್ಲಿರುವ ಚಕ್ರವ್ಯೂಹಗಳ ಮೇಲೆ ಶ್ರೀಚಕ್ರದ ಪ್ರಭಾವ ಹೇಗೆ ಬೀರುತ್ತದೆ ಎಂಬ ಬಗ್ಗೆ ವಿವರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ಜ್ಞಾನ ಭಾರತೀ (ರಿ.), ಅಧ್ಯಕ್ಷ ಸಿ.ಎಸ್.ರಾವ್ ಮಾತನಾಡಿ ಇಂತಹ ಸಪ್ತಾಹಗಳಿಂದ ಹಿಂದೂ ಧರ್ಮದ ರಕ್ಷಣೆ, ಸಮಾಜದ ಏಳಿಗೆ ಸಾಧ್ಯ ಎಂದರು. ಜ್ಞಾನಭಾರತಿ (ರಿ.)ನ ಕಾರ್ಯದರ್ಶಿ ಡಾ| ಎಸ್.ಎಲ್. ಕರಣಿಕ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ವಂದಿಸಿದರು. ಹವ್ಯಕಸಭಾದ ಅಧ್ಯಕ್ಷ ಡಾ| ಗೋಪಾಲಕೃಷ್ಣ ಭಟ್ ಉಪಸ್ಥಿತರಿದ್ದರು.

ವರದಿ : **ಡಾ| ಎಸ್.ಎಲ್.ಕರಣಿಕ್**

## ಶ್ರೀ ಕೃಷ್ಣರಾವ್ ಕರಂದಾಡಿ : ಬಿಜೆಪಿಯ ಮಜೂರು ಸ್ಥಾನೀಯ ಸಮಿತಿಯ ನೂತನ ಅಧ್ಯಕ್ಷರಾಗಿ ಆಯ್ಕೆ



ಶ್ರೀ ಕೃಷ್ಣ ರಾವ್ ಕರಂದಾಡಿ ಇವರು ಬಿಜೆಪಿಯ ಮಜೂರು ಸ್ಥಾನೀಯ ಸಮಿತಿಯ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇವರು ಸಂಘಟನಾ ಚತುರ ಹಾಗೂ ಸಮರ್ಥ ಯುವ ನಾಯಕರಾಗಿದ್ದಾರೆ. ಇವರು ಸಾಮಾಜಿಕ ಕಾರ್ಯಕರ್ತರಾಗಿದ್ದು ಉಡುಪಿಯ ಶ್ರೀ ಶಾರದಾ ಮಂಟಪದ ಯುವ ವೇದಿಕೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಇವರು ಉತ್ತಮ ಕ್ರಿಕೆಟ್ ಆಟಗಾರರು. ಇವರು 'ಕಿಶನ್ ಸ್ಟುಡಿಯೋ ಆ್ಯಂಡ್ ವಿಡಿಯೋ' ಮಜೂರು ಮತ್ತು ಬಂಟಕಲ್ಲು ಇದರ ಮಾಲೀಕರಾಗಿದ್ದಾರೆ. ಇವರ ವಿಶೇಷ ಸಾಧನೆಗಾಗಿ ಶ್ರೀಶಾರದಾ ಅಭಿನಂದನೆಗಳು.

## ಡಾ| (ಶ್ರೀಮತಿ) ಅಪರ್ಣಾ ಸುರೇಂದ್ರ : 'ಯೋಗಶ್ರೀ' ಬಿರುದು ಪುರಸ್ಕೃತರು



ಡಾ| (ಶ್ರೀಮತಿ) ಅಪರ್ಣಾ ಸುರೇಂದ್ರ ಇವರಿಗೆ ಮೈಸೂರಿನ ದಸರಾ ಯೋಗ ಉಪಸಮಿತಿಯು ದಿನಾಂಕ 3 ಮತ್ತು 4ರ ಅಕ್ಟೋಬರ್ 2011ರಂದು ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ನಡೆದ 2 ದಿನಗಳ ಅಂತಾರಾಷ್ಟ್ರೀಯ ಯೋಗ ಸಮ್ಮೇಳನದಲ್ಲಿ, ಯೋಗ ಕ್ಷೇತ್ರದಲ್ಲಿ ಮಾಡಿದ ಸಾಧನೆಗಾಗಿ, 'ಯೋಗಶ್ರೀ' ಎಂಬ ಬಿರುದು ಮತ್ತು ಸ್ಮರಣಿಕೆ ನೀಡಿ ಸನ್ಮಾನಿಸಿದೆ. ಇವರು ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆ.ಎಸ್.ಎಸ್.ಆಯುರ್ವೇದ ಆಸ್ಪತ್ರೆಯಲ್ಲಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ವೈದ್ಯೆಯಾಗಿ ಕಳೆದ 15 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಇವರು ಮೈಸೂರಿನ ಕುವೆಂಪು ನಗರದ ದಿ| ಶ್ರೀ ಕೆ. ಸಚ್ಚಿದಾನಂದಯ್ಯ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಮೋಹಿನಿ ಸಚ್ಚಿದಾನಂದಯ್ಯ ದಂಪತಿಗಳ ಪುತ್ರ ಶ್ರೀ ಕೆ. ಎಸ್. ಸುರೇಂದ್ರರವರ ಧರ್ಮಪತ್ನಿ. ಇವರಿಗೆ ಚಿ| ಕೆ.ಎಸ್.ಮೋಹಶ್ರೀ ಎಂಬ ಪುತ್ರಿ ಮತ್ತು ಚಿ| ಕೆ.ಎಸ್.ಸತ್ಯೇಂದ್ರ ಎಂಬ ಪುತ್ರ ಇದ್ದಾರೆ. ಇವರು ಮೂಲ್ಕಿ ಕೆಂಚನ ಕೆರೆಯಲ್ಲಿ ವಾಸವಾಗಿರುವ ಶ್ರೀ ಕೆ. ಹರಿಹರ ಶರ್ಮ ಮತ್ತು ಶ್ರೀಮತಿ ವೈ. ಜಾನಕಿ ಇವರ ದ್ವಿತೀಯ ಪುತ್ರಿ.

## ಶ್ರೀ ಕೆ. ವಾಸುದೇವ ರಾವ್ : ಸೌತ್‌ಕೆನರಾ ಫೋಟೋ ಗ್ರಾಫರ್ಸ್ ಎಸೋಸಿಯೇಶನ್‌ನ ಅಧ್ಯಕ್ಷರಾಗಿ ಆಯ್ಕೆ



ಶ್ರೀ ಕೆ. ವಾಸುದೇವ ರಾವ್ ಇವರು ಸೌತ್ ಕೆನರಾ ಫೋಟೋಗ್ರಾಫರ್ ಎಸೋಸಿಯೇಶನ್ (ರಿ.), ಮಂಗಳೂರು-ಉಡುಪಿಯ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇವರು ಸಂಘಟನಾ ಚತುರ, ಮಜೂರು ಗ್ರಾಮಪಂಚಾಯತ್‌ನ ಸದಸ್ಯ, ಕರಂದಾಡಿ ಶ್ರೀ ರಾಮ ಹಿ.ಪ್ರಾ.ಶಾಲಾ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ, ಪರ್ಕಳ ಲಯನ್ಸ್ ಕ್ಲಬ್‌ನ ಕಾರ್ಯದರ್ಶಿ, ಉಚ್ಚಿಲ ಸಾರ್ವಜನಿಕ ಗಣೇಶೋತ್ಸವ ಸಮಿತಿಯ ಮಾಜಿ ಅಧ್ಯಕ್ಷ, ''ಜವನೆರ್ ಉಚ್ಚಿಲ'' ಇದರ ಮಾಜಿ ಅಧ್ಯಕ್ಷ, ಕರಂದಾಡಿ ಶ್ರೀ ಬ್ರಹ್ಮಲಿಂಗೇಶ್ವರ ಭಜನಾ ಮಂಡಳಿಯ ಮಾಜಿ ಅಧ್ಯಕ್ಷ, ಕಾಪು ಮಹಾದೇವಿ ಪ್ರೌಢಶಾಲೆಯ ಹಳೆ ವಿದ್ಯಾರ್ಥಿ ಸಂಘದ ಮಾಜಿ ಅಧ್ಯಕ್ಷ, ಕರಂದಾಡಿಯಲ್ಲಿ ಯಶಸ್ವಿಯಾಗಿ ನಡೆದ ಉಡುಪಿ ಜಿಲ್ಲಾ ಮಟ್ಟದ ಗ್ರಾಮೀಣ ಕ್ರೀಡಾ ಕೂಟದ ಸಂಘಟಕ, ಮಜೂರು ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗಾಗಿ ರಾಜಕೀಯ ರಹಿತವಾಗಿ ಶ್ರಮಿಸುತ್ತಿರುವ ಯುವ ಮುಂದಾಳು. ಇವರು ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಇದರ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ಶ್ರೀ ಶಾರದಾ ಮಂಟಪದ ಯುವ ವೇದಿಕೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಇವರು ಉಡುಪಿಯ 'ದೀಪಿಕಾ ಸ್ಟುಡಿಯೋ' ಇದರ ಮಾಲೀಕರಾಗಿದ್ದಾರೆ. ಇವರ ವಿಶೇಷ ಸಾಧನೆಗಾಗಿ ಶ್ರೀಶಾರದಾ ಅಭಿನಂದನೆಗಳು.

## ಶ್ರೀ ಶಾರದಾ ದೇವಸ್ಥಾನ



**ಕುಂಜಿಬೆಟ್ಟು, ಶಾರದಾ ನಗರ, ಉಡುಪಿ-576 102**

**ಶ್ರೀಶಾರದಾ ದೇವಸ್ಥಾನದಲ್ಲಿ ಸಮಾಜ ಬಾಂಧವರ ಹಾಗೂ ಪರಿಸರದ ಭಕ್ತಾಭಿಮಾನಿಗಳ ಅಪೇಕ್ಷೆಯಂತೆ ತಾ.25-12-2011ನೇ ಆದಿತ್ಯವಾರ**

**ಸಾಮೂಹಿಕ ಚಂಡಿಕಾಯಾಗವು**

ನಡೆಯಲಿರುವುದು.

**ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಭಕ್ತ ಬಾಂಧವರೆಲ್ಲರೂ ಪಾಲ್ಗೊಂಡು ಶ್ರೀ ದುರ್ಗಾಮಾತೆಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.**

- ಚಂಡಿಕಾಯಾಗದ ಕರ್ತೃಗಳಾಗಲಿಚ್ಛಿಸುವವರು ದೇವಸ್ಥಾನದ ಅರ್ಚಕರ ಅಥವಾ ಶ್ರೀಶಾರದಾ ಮಂಟಪದ ಮ್ಯಾನೇಜರವರಲ್ಲಿ ರೂ.300/-ನ್ನು ನೀಡಿ ರಶೀದಿ ಪಡೆದುಕೊಳ್ಳಬೇಕಾಗಿ ವಿನಂತಿ.
- ಯಾಗಕ್ಕೆ ತುಪ್ಪ, ತೆಂಗಿನಕಾಯಿ, ಬಾಳೆಹಣ್ಣು, ವೀಳ್ಯದೆಲೆ, ಅಡಿಕೆ, ಗಂಧ, **ಹತ್ತಿ ನೂಲಿನ ಅಥವಾ ರೇಷ್ಮೆಯ** ರವಿಕೆ ಕಣ, ಸೀರೆ, ಯಾಗ ದ್ರವ್ಯಗಳು, ಸಮಿತ್ತು, ಪುಷ್ಪ, ತುಳಸಿ ತಂದಲ್ಲಿ ಯಾಗ ದೇವತೆಗೆ ಅರ್ಪಿಸುವ ಅವಕಾಶವಿದೆ.
- ಸೇವಾ ಕರ್ತೃಗಳು ಬೆಳಿಗ್ಗೆ ಗಂಟೆ 8-00ಕ್ಕೆ ಯಾಗ ಸಂಕಲ್ಪಕ್ಕಾಗಿ ಉಪಸ್ಥಿತರಿರಬೇಕಾಗಿ ವಿನಂತಿ. ಗಂಟೆ 12-00ಕ್ಕೆ ಯಾಗದ ಪೂರ್ಣಾಹುತಿ ನಡೆಯಲಿದೆ.

*ವಿ.ಸೂ. : ಕರ್ತೃಗಳಿಗೆ ಪ್ರತ್ಯೇಕವಾಗಿ ಯಾಗ ಪ್ರಸಾದ ನೀಡುವ ವ್ಯವಸ್ಥೆ ಇದೆ. (ರಶೀದಿ ತೋರಿಸಿ ಪಡೆದುಕೊಳ್ಳಬಹುದು) ಉಪಸ್ಥಿತಿ ಸಾಧ್ಯವಿಲ್ಲದ ಕರ್ತೃಗಳು ಮರುದಿನ ರಶೀದಿ ತೋರಿಸಿ ಶಾರದಾ ಮಂಟಪದ ಮ್ಯಾನೇಜರರಿಂದ ಪ್ರಸಾದ ಪಡೆದುಕೊಳ್ಳಬಹುದು.*

**- ವ್ಯವಸ್ಥಾಪಕರು.**

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿ ರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ನಮ್ಮೂರಿನಲ್ಲಿ ಒಂದು "ಮದ್ಯ ವರ್ಜನ ಶಿಬಿರ" ನಡೆಯಿತು. 3-4 ಸಂಘಟನೆಗಳು ಜೊತೆಯಾಗಿ ಹಮ್ಮಿಕೊಂಡ ಈ ಬೃಹತ್ ಕಾರ್ಯಕ್ರಮದಲ್ಲಿ ಸುಮಾರು 70ಕ್ಕೂ ಮಿಕ್ಕಿ "ಕುಡುಕ"ರೆನಿಸಿದ ಶಿಬಿರಾರ್ಥಿಗಳು ಪಾಲ್ಗೊಂಡರು. ಶಿಬಿರದ ವ್ಯವಸ್ಥಾಪನೆಗೆಂದು ನನ್ನಂಥಹ ಸಮಾನಾಭಿಪ್ರಾಯವುಳ್ಳ 3 ಮಂದಿಯನ್ನು ನಿಯುಕ್ತಿಗೊಳಿಸಿದ್ದರು.

ಆದರೆ ನಾನು ಮೊದಲೇ ಶರತ್ತು ಹಾಕಿ ನನ್ನ ಕೆಲಸವನ್ನು ಒಪ್ಪಿಕೊಂಡೆ. ಶರತ್ತು ಏನೆಂದರೆ ಶಿಬಿರದ ಉದ್ಘಾಟನೆಗೆ, ಸಮಾರೋಪಕ್ಕೆ, ನಡುವೆ ಸಂಪನ್ಮೂಲ ವ್ಯಕ್ತಿಗಳನ್ನು ನಾವು ಕರೆಯುವುದಿಲ್ಲ, ನೀವು ಸಂಘಟನೆಯವರೇ ಒದಗಿಸಬೇಕು ಎಂದು.

ಹಾಗೆಯೇ ಶಿಬಿರ ಬಹಳ ಜೋರಾಗಿಯೇ ಉದ್ಘಾಟನೆಗೊಂಡಿತು. ದಿನದಲ್ಲಿ ಇಬ್ಬರು ಸಂಪನ್ಮೂಲ ವ್ಯಕ್ತಿಗಳಂತೆ 8 ದಿನದಲ್ಲಿ ಹಲವಾರು ಸಂಪನ್ಮೂಲ ವ್ಯಕ್ತಿಗಳು ಶಿಬಿರಾರ್ಥಿಗಳಿಗೆ ಉಪಯುಕ್ತ ಮಾಹಿತಿ ನೀಡಿದರು. ಸಮಾರೋಪ ಸಮಾರಂಭವೂ ಯಶಸ್ವಿಯಾಗಿ ನೆರವೇರಿತು.


ಶಿಬಿರಾರ್ಥಿಗಳಲ್ಲಿ ಸುಮಾರು 10% ಜನರು ತಮ್ಮ ಮನಪರಿವರ್ತನೆಗೊಂಡು 'ಚಟ'ವನ್ನು ಬಿಡುವುದು ಖಂಡಿತವೆಂಬ ಭಾವನೆ ನಮಗೆ ಮೂಡಿತು. ಇದು ಬಹಳ ದೊಡ್ಡ ಸಾಧನೆ ಎಂದೇ ಹೇಳಬೇಕು.

ಇಲ್ಲಿ ನಾವು ಹೇಳಬೇಕಾದುದು ಏನೆಂದರೆ ಸಂಘಟಕರಲ್ಲಿ ಉದ್ಘಾಟನೆಯ ಮತ್ತು ಸಮಾರೋಪ ಸಮಾರಂಭದಲ್ಲಿ ಹಾಗೂ ಸಂಪನ್ಮೂಲ ವ್ಯಕ್ತಿಗಳಲ್ಲಿ 'ಕುಡುಕ'ರಲ್ಲದವರ ಸಂಖ್ಯೆ ಬಹಳ ಕಡಿಮೆ ಇತ್ತು. (ಒಟ್ಟು ಶಿಬಿರದಲ್ಲಿ ಪಾಲ್ಗೊಂಡ ಗಣ್ಯರಲ್ಲಿ ಸುಮಾರು 8-9 ಜನ ಕುಡುಕರಲ್ಲದವರಿದ್ದರೆಂದು ನನ್ನ ನಂಬಿಕೆ) ಇವರಲ್ಲಿ ಸ್ವಲ್ಪ ಕುಡಿಯುವವರೂ, ಕುಡಿತ ಮಾಡಿ ಅಲ್ಲಲ್ಲಿ ಬೀಳದವರು ಅಥವಾ ಮರ್ಯಾದಸ್ಥ ಕುಡುಕರೆಂದರೂ ತಪ್ಪಲ್ಲ. ಇವರೆಲ್ಲಾ ಇಂತಹ ಸಮಾರಂಭದಲ್ಲಿ ಭಾಗವಹಿಸಿ ಇತರ 'ಕುಡುಕ'ರೆಂದು ಕರೆಯಲ್ಪಡುವವರಿಗೆ ಬೋಧನೆ ಮಾಡುವುದು ಅಥವಾ ಚಟದಿಂದ ಆಗುವ ತೊಂದರೆಗಳನ್ನು ವಿವರಿಸುವುದು ನಡೆದಿತ್ತು. ಶಿಬಿರದಲ್ಲಿ ಇವನ್ನೆಲ್ಲಾ ನೋಡಿ, ಕೇಳಿ ನಮ್ಮ ಮೈಯನ್ನೇ ನಾವು ಪರಚುಕೊಳ್ಳುವಂತೆ ಆಗುತ್ತಿತ್ತು.

ಈ ಕಾರಣದಿಂದಲೇ ನಾನು ಮೊದಲೇ ಷರತ್ತು ವಿಧಿಸಿದ್ದು, ಯಾಕೆಂದರೆ ಇಷ್ಟೊಂದು 'ಸಾಚಾ' ಗಣ್ಯರನ್ನು ಶಿಬಿರಕ್ಕೆ ಪ್ರತಿ ದಿನ ಕರೆತರುವುದು ನಮ್ಮಿಂದ ಆಗದ ಕೆಲಸ. ಆದರೂ ಶಿಬಿರಕ್ಕೆ ಆಗಮಿಸಿದ ಗಣ್ಯರೊಬ್ಬರು ಕೇಳಿದ 'ಹಾಸ್ಯ'- "ಈಗಿನ ಸಮಾಜದಲ್ಲಿ ಕುಡಿಯದವರು ಯಾರಿದ್ದಾರೆ ಸ್ವಾಮಿ?"

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



**- ಕೆ. ಆತ್ಮಾರಾಮ ಶಾಸ್ತ್ರೀ**
**ಬೆಂಗಳೂರು**

(ಹಿಂದಿನ ಸಂಚಿಕೆಯಿಂದ...)

ಭಗವಂತನು ಸತ್ಯಭಾಮೆಯ ಸಹಿತ ಗರುಡನನ್ನೇರಿ ಪ್ರಾಗ್ಜ್ಯೋತಿಷಪುರಕ್ಕೆ ಹೋದನು. ಆ ಪುರ ಅತ್ಯಂತ ದುರ್ಗಮವಾಗಿತ್ತು. ಮೊದಲು ಪರ್ವತಗಳ ಕೋಟೆ, ಅನಂತರ ಶಸ್ತ್ರಗಳ ಕೋಟೆ, ಆಮೇಲೆ ನೀರಿನ ಕೋಟೆ, ಬಳಿಕ ಬೆಂಕಿಯ ಕೋಟೆ, ಕೊನೆಗೆ ಗಾಳಿಯ ಕೋಟೆ- ಹೀಗೆ ಐದು ಕೋಟೆಗಳಿಂದಲೂ, ಮುರನೆಂಬ ರಾಕ್ಷಸನ ಶಕ್ತಿಶಾಲಿ ಪಾಶಗಳಿಂದಲೂ ಅದು ಸುತ್ತುವರಿದಿತ್ತು. ವಾಸುದೇವನು ಗಿರಿದುರ್ಗವನ್ನು ಗದೆಯಿಂದ ಪುಡಿಗಟ್ಟಿದನು; ಶಸ್ತ್ರದುರ್ಗವನ್ನು ಬಾಣಗಳಿಂದ ಒಡೆದುಹಾಕಿದನು; ಜಲ, ಅಗ್ನಿ, ವಾಯು ದುರ್ಗಗಳನ್ನು ಚಕ್ರದಿಂದ ಧ್ವಂಸ ಮಾಡಿದನು; ಮುರಪಾಶಗಳನ್ನು ಖಡ್ಗದಿಂದ ಕತ್ತರಿಸಿದನು. ಅನಂತರ ಪಾಂಚಜನ್ಯವನ್ನು ಊದಿದನು. ಪ್ರಳಯ ಕಾಲದ ಸಿಡಿಲಿನಂತಿತ್ತು ಅದರ ಭೀಕರ ಧ್ವನಿ. ಆ ಧ್ವನಿಗೆ ರಕ್ಕಸರ ಯಂತ್ರಗಳೂ, ಎದೆಗಳೂ ಒಡೆದು ಹೋದವು. ಗದಾಧರನು ಪುರದ ಕೋಟೆಯನ್ನು ಒದೆದು ಬೀಳಿಸಿದನು.

ಪಾಂಚಜನ್ಯದ ಧ್ವನಿಯನ್ನು ಕೇಳಿ ಸಮುದ್ರದ ನೀರಿನಲ್ಲಿ ಮಲಗಿ ನಿದ್ರಿಸುತ್ತಿದ್ದ ಮುರಾಸುರನು ಎಚ್ಚತ್ತನು. ಅವನಿಗೆ ಐದು ತಲೆಗಳಿದ್ದವು. ಅವನು ಪ್ರಳಯ ಕಾಲದ ಸೂರ್ಯ, ಬೆಂಕಿಗಳಂತೆ ಹೊಳೆಯುತ್ತಿದ್ದನು. ಐದು ಮುಖಗಳಿಂದ ಮೂರು ಲೋಕಗಳನ್ನು ನುಂಗಲೋ ಎಂಬಂತೆ, ಗರುಡದ ಮರಿಯೆಡೆಗೆ ಓಡುವ ಸರ್ಪದಂತೆ ತ್ರಿಶೂಲವನ್ನೆತ್ತಿಕೊಂಡು ಶ್ರೀಕೃಷ್ಣನ ಬಳಿಗೆ ಧಾವಿಸಿ ಬಂದನು. ಆಗ ಐದು ಮುಖಗಳಿಂದಲೂ ಆರ್ಭಟಿಸುತ್ತಿದ್ದನು. ಆ ಶಬ್ದ ಹತ್ತು ದಿಕ್ಕುಗಳಲ್ಲಿ ಪ್ರತಿಧ್ವನಿಸಿ ಬ್ರಹ್ಮಾಂಡವನ್ನೇ ಆವರಿಸಿತು. ಅಸುರಾಂತಕ ದೇವನು ಆ ತ್ರಿಶೂಲವನ್ನು ಎರಡು ಬಾಣಗಳಿಂದ ಮೂರು ತುಂಡು ಮಾಡಿದನು. ಬಳಿಕ ಇವನ ಮುಖಪಂಚಕವನ್ನು ಬಾಣಗಳಿಂದ ಗಾಸಿಗೊಳಿಸಿದನು. ಇದರಿಂದ ಮತ್ತೂ ರೊಚ್ಚಿಗೆದ್ದ ಮುರನು ಕೃಷ್ಣನ ಮೇಲೆ ಗದೆಯನ್ನೆಸೆದನು. ಭಗವಂತನು ತನ್ನ ಗದೆಯಿಂದ ಅದನ್ನು ಸಾವಿರಾರು ತುಂಡು ಮಾಡಿದನು. ಆಗ ರಕ್ಕಸನು ತನ್ನ ಬಾಹುವನ್ನು ಮುಂಚಾಚಿ ಭಗವಂತನ ಮೇಲೆ ಆಕ್ರಮಣ ಮಾಡಲು ಬಂದನು. ಆಗ ಚಕ್ರಧರನು ತನ್ನ ಚಕ್ರದಿಂದ ಅವನ ಐದು ಮುಖಗಳನ್ನು ಕತ್ತರಿಸಿಬಿಟ್ಟನು. ಇದರಿಂದ ಇಂದ್ರನ ವಜ್ರಾಯುಧದ ಆಘಾತಕ್ಕೆ ಒಳಗಾದ ಪರ್ವತದಂತೆ ಆ ಮುರಾಸುರನ ತಲೆಯಿಲ್ಲದ ದೇಹ ನೀರಿನಲ್ಲಿ ಬಿತ್ತು. ಆಗ ಅವನನ ಏಳು ಮಕ್ಕಳು ಮಹಾಕ್ರೋಧದಿಂದ ಶ್ರೀಕೃಷ್ಣನೊಡನೆ ಯುದ್ಧಕ್ಕೆ ಬಂದರು. ಅವರು ಕ್ರಮವಾಗಿ ತಾಮ್ರ, ಅಂತರಿಕ್ಷ, ಶ್ರವಣ, ವಿಭಾವಸು, ವಸು, ನಭಸ್ವಾನ್ ಮತ್ತು ಅರುಣ ಎಂಬ ಹೆಸರಿನವರು. ಪೀಠನೆಂಬವನು ಅವರ ಸೇನಾಪತಿಯಾಗಿದ್ದನು. ಅವರು ಬಾಣ, ಖಡ್ಗ, ಗದೆ, ಶಕ್ತಿ ಮೊದಲಾದ ಆಯುಧಗಳನ್ನು ಅಸುರಾರಿಯ ಮೇಲೆ ಪ್ರಯೋಗಿಸಿದರು. ಅವುಗಳು ಶ್ರೀಕೃಷ್ಣನ ಬಾಣಗಳಿಂದ ಎಳ್ಳಿನಂತೆ ಪುಡಿ ಪುಡಿಯಾದವು. ಅಲ್ಲದೆ ಪೀಠ ಮೊದಲಾದ ರಾಕ್ಷಸರೂ ಭಗವಂತನ ಚಕ್ರ, ಬಾಣಗಳಿಗೆ ಸಿಕ್ಕಿ ಯಮಲೋಕವನ್ನೈದಿದರು. ಇದನ್ನು ನೋಡಿ ಭೂಮಿ ಪುತ್ರನಾದ ನರಕಾಸುರನು ಕ್ರೋಧೋನ್ಮತ್ತನಾಗಿ ಸಾಗರದಲ್ಲಿ ಹುಟ್ಟಿದ ಮದಗಜಗಳ ಸೇನೆಯನ್ನು ನಡೆಸುತ್ತ ಬಂದನು. ಗರುಡನ ಮೇಲೆ ಸತ್ಯಭಾಮಾ ಸಹಿತನಾಗಿ ಕುಳಿತಿದ್ದ ಶ್ರೀಕೃಷ್ಣನನ್ನು ಮಿಂಚಿನಿಂದ ಕೂಡಿದ ಮೇಘದಂತಿರುವುದನ್ನು ನೋಡಿದನು. ಅವನು ಕೃಷ್ಣನ ಮೇಲೆ ಶತಘ್ನಿ ಎಂಬ ಆಯುಧವನ್ನು ಪ್ರಯೋಗಿಸಿದನು. ಅದೇ ಕಾಲಕ್ಕೆ ಅವನ ಸೈನಿಕರೂ ಶಸ್ತ್ರಗಳನ್ನೆಸೆದರು. ಗದಾಗ್ರಜನೂ ಚಿತ್ರ ವಿಚಿತ್ರವಾದ ಬಾಣಗಳಿಂದ ಭೌಮಾಸುರನ ಯೋಧರ, ಆನೆಗಳ, ಕುದುರೆಗಳ ಅಂಗಾಂಗಗಳನ್ನು ತರಿದು ಕೊಂದನು. ಗರಡನೂ ತನ್ನ ಕೊಕ್ಕು, ರೆಕ್ಕೆ, ಉಗುರುಗಳಿಂದ ಶತ್ರುವಿನ ಆನೆಗಳನ್ನು ಗಾಯಗೊಳಿಸಿದನು. ಆ ಆನೆಗಳು ನೋವು ತಾಳಲಾರದೆ ಘೀಳಿಡುತ್ತಾ ನಗರದೊಳಗೆ ಓಡಿ ಹೋದವು. ಆಗ ನರಕನು ತನ್ನ ಶಕ್ತ್ಯಾಯುಧವನ್ನು ಗರುಡನ ಮೇಲೆ ಪ್ರಯೋಗಿಸಿದನು. ಆದರೆ ಅದು ಆನೆಗೆ ಮಾಲೆಯಿಂದ ಹೊಡೆದಂತಾಯಿತು. ಗರುಡನು ವಿಚಲಿತನಾಗಲಿಲ್ಲ. ಆಗ ಅಸುರನ ಕೋಪ ಮೇರೆ ಮೀರಿತು. ಅವನು ತೀಕ್ಷ್ಣವಾದ ತ್ರಿಶೂಲವನ್ನು ಎಸೆದನು. ಅಷ್ಟರಲ್ಲಿ ಯಾದವ ಶಿರೋಮಣಿಯು ತನ್ನ ಚಕ್ರವನ್ನು ಪ್ರಯೋಗಿಸಿ ಆನೆಯ ಮೇಲಿದ್ದ ರಕ್ಕಸನ ತಲೆಯನ್ನೇ ಕತ್ತರಿಸಿಬಿಟ್ಟನು. ಆಗ ಅವನ ಬಂಧುಗಳೆಲ್ಲ ಅಯ್ಯೋ ಎಂದು ಗೋಳಾಡಿದರು. ಋಷಿಗಳು, ದೇವತೆಗಳು ಸಾಧು ಸಾಧು ಎಂದು ಕೊಂಡಾಡಿದರು. ದೇವತೆಗಳು ಹೂಮಳೆಯನ್ನೂ ಸುರಿಸಿದರು.

ನರಕಾಸುರನ ವಧೆಯಾಗುತ್ತಲೇ ಭೂದೇವಿಯು ಬಂದು ಶ್ರೀಕೃಷ್ಣನ ಕತ್ತಿಗೆ ವೈಜಯಂತಿಯೊಂದಿಗೆ ವನಮಾಲೆಯನ್ನು ಹಾಕಿದಳು. ಹಾಗೇ ನರಕನು ಕಿತ್ತುಕೊಂಡಿದ್ದ ಕುಂಡಲ, ಮಣಿ, ವರುಣನ ಛತ್ರಗಳನ್ನೂ ಅರ್ಪಿಸಿದಳು. ಅನಂತರ ಭೂದೇವಿಯು ಕೈಮುಗಿದುಕೊಂಡು ವಿಶ್ವೇಶ್ವರನಾದ ಶ್ರೀಕೃಷ್ಣನನ್ನು ವಿಧವಿಧವಾಗಿ ಸ್ತುತಿಸಿದಳು. ಕೊನೆಗೆ ಪ್ರಾರ್ಥಿಸಿಕೊಂಡಳು, "ಪ್ರಭುವೆ, ನನ್ನ ಮಗ ನರಕನ ಪುತ್ರನಾದ ಭಗದತ್ತನು ತುಂಬಾ ಹೆದರಿಕೊಂಡಿರುವನು. ನಿನ್ನ ಚರಣ ಕಮಲಗಳಿಗೆ ಶರಣು ಬರುವಂತೆ ಅವನನ್ನು ಕರೆದುತಂದಿರುವೆನು. ಅವನನ್ನು ಪಾಲಿಸುವ ಭಾರ ಕೃಪಾಕರನಾದ ನಿನ್ನದು. ಸಕಲ ದುರಿತಗಳನ್ನು ಹೋಗಲಾಡಿಸುವ ನಿನ್ನ ಕೈದಾವರೆಯನ್ನು ಅವನ ತಲೆಯ ಮೇಲಿಟ್ಟು ಅನುಗ್ರಹಿಸು". ಭೂದೇವಿಯ ಪ್ರಾರ್ಥನೆಯಂತೆ ಶ್ರೀಕೃಷ್ಣನು ಭಗದತ್ತನಿಗೆ ಅಭಯವನ್ನಿತ್ತನು. ಅನಂತರ ಸರ್ವಸಂಪತ್ತುಗಳಿಂದ ತುಂಬಿದ್ದ ನರಕಾಸುರನ ಅರಮನೆಯನ್ನು ಪ್ರವೇಶಿಸಿದನು. ಅಲ್ಲಿ ನರಕಾಸುರನು ಬೇರೆ ಬೇರೆ ದೇಶಗಳಿಂದ ಸೆಳೆದು ತಂದಿದ್ದ ಹದಿನಾರು ಸಾವಿರಕ್ಕಿಂತಲೂ ಹೆಚ್ಚು ರಾಜಪುತ್ರಿಯರನ್ನು ಶ್ರೀಹರಿಯು ಕಂಡನು. ಅಪ್ರತಿಮ ಸುಂದರನಾದ ಅವನನ್ನು ನೋಡಿದ ರಾಜಕುಮಾರಿಯರು ಮೋಹಗೊಂಡು ಅವನನ್ನೇ ತಮ್ಮ ಪತಿಯೆಂದು ಮನಸ್ಸಿನಲ್ಲಿ ವರಿಸಿದರು. ಭಗವಂತನು ಅವರಿಗೆ ಅಭಯವನ್ನಿತ್ತನು. ನರಕಾಸುರನ ಸಂಪತ್ತಿನೊಂದಿಗೆ ಅವರನ್ನೆಲ್ಲ ಮೇನೆಗಳಲ್ಲಿ ದ್ವಾರಕೆಗೆ ಕಳುಹಿಸಿದನು. ಐರಾವತಕುಲದಲ್ಲಿ ಹುಟ್ಟಿದ್ದ, ನಾಲ್ಕು ದಂತಗಳಿರುವ ಅರ್ವತ್ತನಾಲ್ಕು ಆನೆಗಳನ್ನೂ ಕಳುಹಿಸಿದನು. ಅನಂತರ ದೇವೇಂದ್ರನ ಭವನಕ್ಕೆ ಹೋಗಿ ಅದಿತಿಗೆ ಅವಳ ಕುಂಡಲಗಳನ್ನು ಕೊಟ್ಟನು. ಇಂದ್ರನು ಇಂದ್ರಾಣೀ ಸಹಿತನಾಗಿ ಕೃಷ್ಣ ದಂಪತಿಗಳಿಗೆ ಪೂಜೆ ಸಲ್ಲಿಸಿದನು. ಅಲ್ಲಿ ಸತ್ಯಭಾಮೆಯು ಪಾರಿಜಾತ ಪುಷ್ಪವನ್ನು ಬಹುವಾಗಿ ಇಷ್ಟಪಟ್ಟಳು. ಕೃಷ್ಣನು ಪಾರಿಜಾತ ವೃಕ್ಷವನ್ನು ದ್ವಾರಕೆಗೆ ಒಯ್ಯಲು ಇಷ್ಟಪಟ್ಟರೂ ದೇವತೆಗಳು ವಿರೋಧಿಸಿದರು. ಆಗ ಯಾದವ ವೀರನು ದೇವತೆಗಳನ್ನು ಬಗ್ಗುಬಡಿದು ವೃಕ್ಷವನ್ನು ಗರುಡನ ಮೇಲೇರಿಸಿಕೊಂಡು ದ್ವಾರಕೆಗೆ ಹಿಂದಿರುಗಿದನು.

(ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

**ಅಖಿಲೇಷು ವಿಹಂಗೇಷು ಸತ್ಸು ಸ್ವಚ್ಛಂದಚಾರಿಷು ।**
**ಶುಕ ಪಂಜರ ಬದ್ಧಾಸ್ತೇ ಮಧುರಾಣಾಂ ಗಿರಾಂ ಫಲಂ ॥**

ಅಂದರೆ ಎಲ್ಲಾ ಹಕ್ಕಿಗಳು ಬೇಕಾದಂತೆ ತಿರುಗಾಡಿಕೊಂಡಿರುವಲ್ಲಿ ಗಿಳಿಮಾತ್ರ ಪಂಜರದಲ್ಲಿ ಸಿಕ್ಕಿ ನರಳುತ್ತದೆ. ಒಳ್ಳೇ ನುಡಿಗಳನ್ನು ನುಡಿದುದಕ್ಕೆ ಇದೇ ಫಲವು.

**ಪುಸ್ತಕ ಪರಿಚಯ :**

### ಸಂಗೀತ ಬ್ರಹ್ಮ ಶ್ರೀ ತ್ಯಾಗರಾಜರ ಬದುಕು ಮತ್ತು ಸಂಗೀತ

*ಲೇಖಕರು :* ಕೆ. ರಾಮರಾವ್ ಗುಂಡಿಹಿತ್ತಿಲು
*ಪ್ರಕಾಶನ :* ಸಾಧನಾ ಪ್ರಕಾಶನ, ಬೆಂಗಳೂರು
*ಮುದ್ರಣ :* ಹರಿಓಂ ಪ್ರಿಂಟರ್ಸ್ ಬೆಂಗಳೂರು
*ಬೆಲೆ :* ರೂ.75/-

'ಸಂಗೀತ ಬ್ರಹ್ಮ ಶ್ರೀ ತ್ಯಾಗರಾಜರ ಬದುಕು ಮತ್ತು ಸಂಗೀತ' - ಈ ಕೃತಿಯ ಮುನ್ನುಡಿಯಲ್ಲಿ ಶ್ರೀ ಕೆ. ವೆಂಕಟರಮಣ, ಸಂಗೀತ ವಿದ್ವಾನ್ ಇವರು ತಿಳಿಸುತ್ತಾರೆ - "ಜಂತೂನಾಂ ನರಜನ್ಮ ದುರ್ಲಭಂ ಪುರಂದರದಾಸರು ಇದನ್ನೆ 'ಮಾನವ ಜನ್ಮ ದೊಡ್ಡದು ಇದ ಹಾನಿಮಾಡಬೇಡಿ ಹುಚ್ಚಪ್ಪಗಳಿರಾ' ಎಂದು ಜಗತ್ತಿಗೆ ಸಾರಿದರು. ಮಾನವನ ಜೀವನದ ಅಂತಿಮ ಗುರಿಯೇ ಮೋಕ್ಷಸಾಧನೆ. ಹಾಗೆಂದು ಅದನ್ನು ಜೀವನದ ಅಂತ್ಯಕಾಲಕ್ಕೆ ಸಾಧಿಸುವುದು ಅಸಾಧ್ಯ.... ಶ್ರೀ ತ್ಯಾಗರಾಜಸ್ವಾಮಿಗಳನ್ನು ಮನಸಾ ಶಿರಸಾ ತನ್ನ ಗುರುವಾಗಿ ಸ್ವೀಕರಿಸಿಕೊಂಡವರು ಶ್ರೀ ರಾಮರಾಯರು. ಕೀರ್ತನೆಯಲ್ಲಡಗಿದ ರಸಭಾವವನ್ನು, ಶಬ್ದ ಪ್ರಯೋಗದಲ್ಲಿರುವ ಪ್ರಾಸಬದ್ಧವಾದ ಸಂಕಲನವನ್ನೂ ಸವಿಸ್ತಾರವಾಗಿ ವಿವರಿಸಿದ ರೀತಿ ಅದ್ಭುತ.... ಮೂವತ್ತು ಬಾರಿ ಶ್ರೀ ತ್ಯಾಗರಾಜೋತ್ಸವವನ್ನು ಕಂಡ ರಾಮರಾಯರ ಹೃದಯದಲ್ಲಿ ಶ್ರೀ ರಾಮಚಂದ್ರ, ಲಕ್ಷ್ಮಣ, ಮಾತೆ ಜಾನಕಿ, ಹನುಮಂತ ಹಾಗೂ ಶ್ರೀ ತ್ಯಾಗರಾಜರು ನೆಲೆಸಿರುವುದಕ್ಕೆ ಈ ಪುಸ್ತಕವೇ ಸಾಕ್ಷಿ. ನಾನು ತಿಳಿದಂತೆ ತ್ಯಾಗರಾಜ ಸ್ವಾಮಿಗಳ ಸವಿವರವಾದ ಜೀವನಚರಿತ್ರೆಯ ಬೇರೊಂದು ಪುಸ್ತಕ ಕನ್ನಡ ಭಾಷೆಯಲ್ಲಿ ಮುದ್ರಿಸಿದೆಯೋ ಅನ್ನುವ ಸಂಶಯ. ನನ್ನನಿಸಿಕೆಯಂತೆ ಯಾರಾದರೂ ಕರ್ನಾಟಕ ಸಂಗೀತ ಮತ್ತು ತ್ಯಾಗರಾಜರು ಅನ್ನುವ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆಯುವಲ್ಲಿ ರಾಮರಾಯರ ಈ ಪುಸ್ತಕ ಬಹಳಷ್ಟು ಸಹಾಯಕವಾಗಬಹುದು."

ಗ್ರಂಥಕರ್ತರ ಕುರಿತು ಪ್ರಸ್ತಾವನೆಯಲ್ಲಿ ಶ್ರೀ ಕೇಶವ ಶೆಟ್ಟಿ ಕೆ. ಆದೂರು ಇವರು ತಿಳಿಸುತ್ತಾರೆ ಹೀಗೆ-"....ಗ್ರಂಥಕರ್ತ, ಲೇಖಕ, ಕವಿ, ನಾದೋಪಾಸಕನಾದ ಗುಂಡಿಹಿತ್ಲು ಕೆ. ರಾಮರಾಯರು ಜನಿಸಿದ್ದು 19-3-1936ರಲ್ಲಿ ಮಧೂರು ಸಮೀಪದ ಗುಂಡಿಹಿತ್ಲುವಿನಲ್ಲಿ. ತಂದೆ ಗುಂಡಿಹಿತ್ಲು ದಿ। ಶ್ರೀಕೃಷ್ಣಯ್ಯನವರು ಒಳ್ಳೆಯ ಯಕ್ಷಗಾನ ಭಾಗವತರಾಗಿದ್ದರು. ತಾಯಿ ಸಾಧ್ವೀಮಣಿ ದಿ। ಸಾವಿತ್ರೀ ಅಮ್ಮನವರು.... ಕನ್ನಡದ ಸುಪ್ರಸಿದ್ಧ ಕವಿ-ಕತೆಗಾರ ಎಂ.ವ್ಯಾಸರ ಮನ್ನಿಪ್ಪಾಡಿಯ 'ಕೃಪಾ ನಿಲಯ'ದಲ್ಲಿರುವ ರಾಮರಾಯರು ದೈಹಿಕವಾಗಿ ಅಸ್ವಸ್ಥರಾಗಿದ್ದಾರೆ ಎಂಬುದು ಸಂಕಟದ ವಿಷಯ. ಅಳಿಯನಾದ ವ್ಯಾಸರ ಮಗ ಡಾ। ತೇಜಸ್ವಿ ಮತ್ತು ಮಗಳು ಡಾ। ಅನಿತಾರ ಶುಶ್ರೂಷೆಯಲ್ಲಿರುವ ಕೆ. ರಾಮರಾಯರು ಬದುಕಿನಲ್ಲಿ ಹೆಚ್ಚು ಪಾಲು ಕಹಿಯನ್ನು ಸಂಗೀತದಲ್ಲಿ ಸಿಹಿಯನ್ನೂ ಅನುಭವಿಸುತ್ತಾ ಬಂದಿರುತ್ತಾರೆ".

ಈ ಕೃತಿಯ ಲೇಖಕರು ತಿಳಿಸಿದಂತೆ-"ಶ್ರೀರಾಮ ಮತ್ತು ಸಂಗೀತವನ್ನು ಚಿಕ್ಕಂದಿನಿಂದಲೇ ಆರಾಧಿಸುತ್ತಾ ಬಂದೆ. ನಾನು ಹಿಂದೆ ತಮಿಳ್ನಾಡಿನಲ್ಲಿ ಉದ್ಯೋಗದಲ್ಲಿರುವಾಗ 'ನೈವೇಲಿ'ಯಲ್ಲಿ ನೈವೇಲಿ ಸಂಗೀತ ಸಭಾದವರು ಪ್ರತೀ ತಿಂಗಳು ಎರಡು ಬಾರಿ ಏರ್ಪಡಿಸುತ್ತಿರುವ ಶಾಸ್ತ್ರೀಯ ಸಂಗೀತ ಕಚೇರಿಗಳಿಗೆ ಹೋಗುತ್ತಿದ್ದೆ. ಇದರಿಂದ ನನ್ನಲ್ಲಿ ಅವಿತಿದ್ದ ಸಂಗೀತಾಸಕ್ತಿ ಇನ್ನಷ್ಟು ಗಾಢವಾಗಿ ವೃದ್ಧಿಗೊಂಡಿತು".

"ಎಂದರೂ ಮಹಾನುಭಾವುಲಂದರಿಕಿ ವಂದನಮು..." ಎಂಬುದು 'ಶ್ರೀರಾಗ'ದಲ್ಲಿ ರಚಿತವಾದ ಲೋಕಪ್ರಸಿದ್ಧ ಕೀರ್ತನೆ. ಇದರಲ್ಲಿ ಶ್ರೀ ತ್ಯಾಗರಾಜರು "ಈ ಲೋಕದಲ್ಲಿ ಮಹಾನುಭಾವರುಗಳು ಎಷ್ಟೋ ಮಂದಿ, ಅವರೆಲ್ಲರಿಗೂ ನನ್ನ ವಂದನೆಗಳು.... ತ್ಯಾಗರಾಜನಿಂದ ಸ್ತುತಿಸಲ್ಪಡುವಂಥಹ ಅವನ ನಿಜ ದಾಸರಾದ ಸದ್ಭಕ್ತರು, ಎಷ್ಟೋ ಮಂದಿ ಅವರೆಲ್ಲರಿಗೂ ನನ್ನ ವಂದನೆಗಳು" ಎಂದು ಹಾಡುತ್ತಾರೆ. ಆದ್ದರಿಂದ ಶ್ರೀ ತ್ಯಾಗರಾಜರ ಬದುಕು ಮತ್ತು ಸಂಗೀತದ ಬಗ್ಗೆ ಅಪೂರ್ವವಾಗಿ ರಚಿಸಿದ ಈ ಕೃತಿಯ ಲೇಖಕರಾದ ಕೆ. ರಾಮರಾವ್ ಗುಂಡಿಹಿತ್ತಿಲು ಅವರಿಗೆ ವಂದನೆಗಳು.

**- ವೈ. ಮೋಹನ ರಾವ್.**

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ.

# ಮಂಗಳಗೌರೀ ವ್ರತ ಕಥಾಸಾರ



- ವೈ. ಯಂ. ಶ್ರೀಧರ ರಾವ್
''ಸುದರ್ಶನ ನಿಲಯ'', ಆದಮಾರು.

ಪೂರ್ವದಲ್ಲಿ ದ್ರುಪದ ಪುತ್ರಿಯಾದ ದ್ರೌಪದಿಯು ಸ್ವಸ್ಥಚಿತ್ತದಿಂದ ಕೂಡಿ ಸಕಲಕಲಾ ಪ್ರವೀಣರಾದ ಸೂತ ಪುರಾಣಿಕರನ್ನು ನೋಡಿ ಶಿರಸಾಷ್ಟಾಂಗ ನಮಸ್ಕಾರ ಮಾಡಿ ''ಪೂಜ್ಯರೇ, ನಿಮ್ಮಿಂದ ನಾವು ಅನೇಕ ವ್ರತಗಳ ಮಹಾತ್ಮೆಯನ್ನು ಕೇಳಿದ್ದಾಯಿತು. ಆದರೆ ಈಗ ನಾನು ಅತ್ಯಂತ ಮಂಗಳಕರವಾದ ಮಂಗಳ ಗೌರೀ ವ್ರತವನ್ನು ಕೇಳಬೇಕೆಂದು ಅಪೇಕ್ಷಿಸುತ್ತಿರುವೆನು. ದಯಮಾಡಿ ತಿಳಿಸಬೇಕೆಂದು ಕೇಳಲಾಗಿ, ಎಲೈ ದ್ರುಪದ ನಂದಿನಿಯೇ ಕೇಳು–

''ನೀನು ಕೇಳುತ್ತಿರುವ ವ್ರತವು–ಅತ್ಯಂತ ಉತ್ತಮೋತ್ತಮವೂ, ಫಲಪ್ರದವೂ ಆದ ವ್ರತ. ಈ ವ್ರತಾಚರಣೆಯಿಂದ ಪತಿಗಳಿಗೆ ಆಯುಸ್ಸು ವೃದ್ಧಿಯಾಗಿ ಕೀರ್ತಿ ಲಭಿಸುತ್ತದೆ''. ಎಂಬುದಕ್ಕೆ ಸುಪ್ರಸಿದ್ಧ ಉದಾ:– ಪೂರ್ವದಲ್ಲಿ ಕುಂಡಿನೀಪುರವೆಂಬ ರಾಜ್ಯದಲ್ಲಿ ಮಹಾಧನಿಕನೂ, ಬ್ರಾಹ್ಮಣ ಭಕ್ತನೂ, ಸತ್ಪುರುಷನೂ, ಸುಪ್ರಸಿದ್ಧನೂ ಆದ ಧರ್ಮದತ್ತನೆಂಬ ಒಬ್ಬ ವರ್ತಕನಿದ್ದನು. ಅವನು ತನ್ನ ಧರ್ಮ ಪತ್ನಿಯೊಂದಿಗೆ ಸುಖವಾಗಿರುವಲ್ಲಿ ಭಿಕ್ಷಾರ್ಥಿಯಾಗಿ ಕಮಂಡಲ ಕುಂಡಲಿ ವಿಭೂತಿ ರುದ್ರಾಕ್ಷಿ ಧಾರಣೆ ಗಳಿಂದ ಶೋಭಿಸುತ್ತಿದ್ದ ಒಬ್ಬ ಸನ್ಯಾಸಿಯು ಭಿಕ್ಷೆಗಾಗಿ ಪ್ರತಿದಿನವೂ ಬಂದು ಆ ಧನಿಕನ ಹೆಂಡತಿಯ ಕೈಯಿಂದ ಭಿಕ್ಷವನ್ನು ಸ್ವೀಕರಿಸದೇ (ಇತ್ತ ಭಿಕ್ಷೆಯನ್ನು ಬಿಸುಟು) ಹಾಗೆಯೇ ಹೊರಟು ಹೋಗುತ್ತಿದ್ದನು. ಈ ವಿಚಾರವನ್ನು ಆಕೆ ತನ್ನ ಗಂಡನಲ್ಲಿ ಹೇಳಿದಾಗ–''ನೀನು ಇದಕ್ಕಾಗಿ ಚಿಂತಿಸಬೇಡ. ನಾಳೆ ಆ ಸನ್ಯಾಸಿ ಭಿಕ್ಷಕ್ಕೆ ಬರುವ ವೇಳೆಗೆ ಸರಿಯಾಗಿ ನಿನ್ನ ಕೈತುಂಬಾ ಚಿನ್ನದ ನಾಣ್ಯಗಳನ್ನು ತೆಗೆದುಕೊಂಡು ಹೋಗಿ ಆತನ ಜೋಳಿಗೆಯಲ್ಲಿ ಹಾಕು'' ಎಂದನು.

ಅದರಂತೆ ಆಕೆ ಮಾರನೇಯ ದಿನ ಮಾಡಲಾಗಿ – ಆ ಸನ್ಯಾಸಿಯು 'ನೀನು ಅಪುತ್ರವಂತಳಾಗು' ಎಂದು ಶಾಪವನ್ನು ಕೊಟ್ಟು ಹೊರಟು ಹೋದನು. ಆಗ ಆಕೆ ದುಃಖಿಸುತ್ತಾ ಓಡಿಹೋಗಿ ಆ ಸನ್ಯಾಸಿಯ ಪಾದಗಳನ್ನು ಹಿಡಿದು–''ಸ್ವಾಮೀ! ನೀವು ಇತ್ತಿರುವ ಶಾಪ ವಿಮೋಚನೆಯಾಗಿ ನಾನು ಪುತ್ರ ಸಂತಾನವನ್ನು ಪಡೆಯಬೇಕಾದರೆ ಏನು ಮಾಡಬೇಕು'' ಎಂದು ಅಂಗಲಾಚಿ ಬೇಡಲಾಗಿ ಆತನು ''ಎಲೈ ನಾರೀಮಣಿಯೇ, ನಿನ್ನ ಪತಿಯು ಕರಿಯ ವಸ್ತ್ರವನ್ನು ಧರಿಸಿ, ಕಪ್ಪು ಕುದುರೆಯನ್ನು ಹತ್ತಿ ಅರಣ್ಯದಲ್ಲಿ ಪ್ರಯಾಣ ಮಾಡುತ್ತಾ ಯಾವ ಸ್ಥಳದಲ್ಲಿ ಕುದುರೆ ಮುಗ್ಗರಿಸುವುದೋ ಅಲ್ಲಿ ನೆಲವನ್ನು ಅಗೆದು ನೋಡಿದರೆ, ಅಲ್ಲಿ ನವರತ್ನ ಖಚಿತವಾದ ಒಂದೇ ದೇವಾಲಯವು ಕಾಣು ವುದು. ಅದರಲ್ಲಿ ಸರ್ವಮಂಗಳೆಯಾದ ಗೌರಿಯು ವಾಸವಾಗಿರುವಳು. ಅವಳನ್ನು ನಿನ್ನ ಪತಿಯು ಶ್ರದ್ಧಾಭಕ್ತಿಯಿಂದ ಪೂಜಿಸಿದರೆ ನಿನ್ನ ಶಾಪ ವಿಮೋಚನೆಯಾಗುವುದು. ಇವನ್ನು ನಿನ್ನ ಗಂಡನಲ್ಲಿ ಹೋಗಿ ಹೇಳು'' ಎಂದು ಹೇಳಿ ಮಾಯವಾದನು.



ತನ್ನ ಪತಿಯು ಮನೆಗೆ ಬಂದೊಡನೆ ಆಕೆ ನಡೆದ ವೃತ್ತಾಂತವನ್ನು ವಿವರಿಸಲು– ವರ್ತಕನು ಖಿನ್ನನಾಗಿ ಶಾಪ ವಿಮೋಚನಾಕಾಂಕ್ಷಿಯಾಗಿ ಕರಿಯ ವಸ್ತ್ರವನ್ನು ಧರಿಸಿ, ಕಪ್ಪುಕುದುರೆಯನ್ನು ಹತ್ತಿ ಅರಣ್ಯಕ್ಕೆ ಹೋಗಿ ಅನ್ನಾಹಾರಾದಿಗಳನ್ನು ಬಿಟ್ಟು ಜಿತಮನಸ್ಕನಾಗಿ ಉಗ್ರತರವಾದ ತಪಸ್ಸನ್ನು ಇಪ್ಪತ್ತೊಂದು ದಿನಗಳ ಕಾಲ ಮಾಡುತ್ತಾ ಮುಂದೆ ಮುಂದೆ ಹೋಗುತ್ತಿರಲು ಸ್ವಲ್ಪ ದೂರದಲ್ಲಿ ಕುದುರೆ ಮುಗ್ಗರಿಸಿ ನಿಂತುಕೊಂಡಿತು. ಆಗ ವರ್ತಕನು ಸಂತೋಷಗೊಂಡು ನೆಲವನ್ನು ಅಗೆಯುವಾಗ್ಗೆ ಅಲ್ಲಿ ಒಂದು ರತ್ನ ಖಚಿತವಾದ ದೇವಾಲಯವು ಕಾಣಿಸಿತು. ಆಗ ವರ್ತಕನು ಸನ್ಯಾಸಿಯನ್ನು ಸ್ಮರಿಸಿ ಕೊಳ್ಳುತ್ತಾ ಕಾಡಿನಲ್ಲೆಲ್ಲಾ ಹುಡುಕಿ, ಪೂಜಾ ದ್ರವ್ಯಗಳನ್ನು ಸಂಗ್ರಹಿಸಿ, ಶ್ರದ್ಧಾ, ಭಕ್ತಿಯಿಂದ ಪೂಜಾ ವಿಧಿಗಳನ್ನು ಸ್ಥಿರ ಮನಸ್ಸಿನಿಂದ ಆಚರಿಸುತ್ತಿರಲು– ಆಗ ಭವಾನಿ ದೇವಿಯು ಪ್ರತ್ಯಕ್ಷಳಾಗಿ ''ಎಲೈ ಭಕ್ತ ವರ್ಯನೇ ನಿನ್ನ ಭಕ್ತಿಗೆ ಮೆಚ್ಚಿದ್ದೇನು. ನಿನಗೆ ಯಾವ ವಿಧವಾದ ಐಶ್ವರ್ಯವನ್ನೂ ಬೇಕಾದರೆ ಕೇಳು, ಕೊಡುವೆ'' ಎನಲು–ವರ್ತಕನು ''ಎಲೈ ಜಗನ್ಮಾತೆಯೇ, ನಿನ್ನ ದಯೆಯಿಂದ ನನಗೆ ಐಶ್ವರ್ಯಕ್ಕೇನೂ ಕಡಿಮೆಯಿಲ್ಲ, ಆದರೆ ನನಗೆ ಸಂತಾನವಿಲ್ಲದಿರುವ ಕಾರಣ ನನಗೆ ಮಕ್ಕಳಾಗುವಂತೆ ಅನುಗ್ರಹಿಸು'' ಎಂದು ಬೇಡಿಕೊಂಡನು. ಆಗ ಭವಾನಿ ದೇವಿಯು ''ಆರ್ಯನೇ ನಿನಗೆ ಮಕ್ಕಳಾಗುವ ಯೋಗವಿಲ್ಲಾ, ಆದ್ದರಿಂದ ನಿನಗೆ ನಾನು ಒಂದು ವರವನ್ನು ಕೊಡುತ್ತೇನೆ. ಕೇಳು– ಹುಟ್ಟಿದ ಮೇಲೆ ವಿಧವೆಯಾಗುವ ಮಗಳು ಬೇಕೋ? ಅಥವಾ ಅಲ್ಪಾಯುವಾದ ಸುಂದರ ದೇಹವುಳ್ಳ ಮಗನು ಬೇಕೋ? ಅಥವಾ ಕುರುಡನಾಗಿ ಬಹುಕಾಲ ಬದುಕುವ ಮಗನಾಗಬೇಕೋ? ಹೇಳು'' ಎನಲು–ಧರ್ಮದತ್ತನು ''ಅಮ್ಮಾ ದೇವಿ, ನಿನ್ನ ದಯೆಯೊಂದಿದ್ದರೆ–ಅಲ್ಪಾಯುವಾದರೂ ಸುಂದರನಾದ ಮಗನನ್ನು ಕರುಣಿಸು. ಅವನಿಂದ ನಾನು ಪಿತೃಋಣ ಮುಕ್ತನಾಗುತ್ತೇನೆ'' ಎನ್ನಲು ಪಾರ್ವತಿಯು ''ಹಾಗೆಯೇ ಆಗಲಿ, ಅಲ್ಲಿ ನೋಡು, ಅಲ್ಲಿ ಗಣಪತಿಯ ಮೇಲೆ ಹತ್ತಿ ಕಾಣುತ್ತಿರುವ ಮಾವಿನ ಮರದಿಂದ ಒಂದು ಹಣ್ಣನ್ನು ಕಿತುಕೊಂಡು ಹೋಗಿ ನಿನ್ನ ಹೆಂಡತಿಗೆ ತಿನ್ನಲು ಕೊಡು. ಅವನ್ನು ಅವಳು ತಿಂದರೆ ಪುತ್ರ ಪ್ರಾಪ್ತಿ ಯಾಗುವುದು'' ಎಂದು ಹೇಳಿ ಅಂತರ್ಧಾನ ಳಾದಳು.

ವರ್ತಕನು ಗಣಪತಿ ಮೇಲೇರಿ ಒಂದು ಹಣ್ಣನ್ನು ಕಿತುಕೊಳ್ಳದೆ, ಬೇಕಾದಷ್ಟು ಹಣ್ಣನ್ನು ಕಿತುಕೊಂಡು ಕೆಳಗಿಳಿದು ನೋಡಿದರೆ ಒಂದೇ ಹಣ್ಣು ಇರುತ್ತಿತ್ತು. ಈ ರೀತಿ ಆ ವರ್ತಕನು ಹದಿನಾರು ಸಾರಿ ಗಣಪತಿಯ ಮೇಲೆ ಹತ್ತಿ ಹಣ್ಣುಗಳನ್ನು ಕೀಳಿದರೂ ಅವನಿಗೆ ಸಿಕ್ಕಿದ್ದು ಒಂದೇ ಹಣ್ಣು. ಆಗ ಗಣಪತಿಯು ಕೋಪಗೊಂಡು ''ನೀನು ನನ್ನ ಮೇಲೆ ಹದಿನಾರು ಸಾರಿ ಹತ್ತಿದೆಯಾದ ಕಾರಣ ನಿನ್ನ ಮಗನಿಗೆ 16ನೇ ವರ್ಷದಲ್ಲಿ ಹಾವು ಕಚ್ಚಿ ಸಾಯಲಿ'' ಎಂದು ಶಾಪವನ್ನು ಕೊಟ್ಟನು. ವರ್ತಕನು ತನ್ನಲ್ಲಿ ಉಳಿದ ಒಂದೇ ಒಂದು ಹಣ್ಣನ್ನು ತೆಗೆದುಕೊಂಡು ಬಂದು ತನ್ನ ಹೆಂಡತಿಗೆ ಕೊಟ್ಟನು. ಆಕೆ ಆ ಹಣ್ಣನ್ನು ತಿಂದು ಪತಿ ಶುಶ್ರೂಷೆಯನ್ನು ಮಾಡಲಾಗಿ ಗರ್ಭವನ್ನು ಧರಿಸಿದಳು. ದಿನ ಕಳೆಯುತ್ತಾ ನವ ಮಾಸಗಳು ತುಂಬಿದ ಮೇಲೆ ಒಂದು ದಿನ ಸುಮುಹೂರ್ತದಲ್ಲಿ ತೇಜೋವಂತನಾಗಿರುವ ರೂಪವಂತನಾಗಿರುವ ಗಂಡು ಮಗುವಿಗೆ ಜನ್ಮವಿತ್ತಳು. ಆಗ ದಂಪತಿಗಳೀರ್ವರ ಆನಂದಕ್ಕೆ ಪಾರವೇ ಇಲ್ಲವಾಯ್ತು.

ಅವರುಗಳು ಕುಮಾರನ ಜಾತಕರ್ಮ, ನಾಮಕರಣಾದಿಗಳನ್ನೆಲ್ಲಾ ಯಥಾವತ್ತಾಗಿ ಮಾಡಿ ಮಗುವಿಗೆ 'ಶಿವ' ಎಂದು ಹೆಸರಿಟ್ಟರು. ಆ ಮಗುವು ದೇವಿಯ ಅನುಗ್ರಹದಿಂದ ದಿನದಿಂದ ದಿನಕ್ಕೆ ಬಾಲಚಂದ್ರನಂತೆ ಬೆಳೆಯುತ್ತಿರಲು–ಎಂಟನೆಯ ವಯಸ್ಸಿನಲ್ಲಿ ಅವನಿಗೆ ಉಪನಯನವನ್ನೂ ಮಾಡಿದರು. ಆ ಹುಡುಗನಿಗೆ ವಿದ್ಯಾಭ್ಯಾಸಾದಿಗಳನ್ನು ಕೊಡಿಸುತ್ತಿರುವಾಗ್ಗೆ–ಆತನಿಗೆ ಹತ್ತು ವರ್ಷಗಳು ತುಂಬಲು ಪತ್ನಿಯು ಮಗನಿಗೆ ವಿವಾಹ ಮಾಡೋಣವೆಂದು ತನ್ನ ಪತಿಯನ್ನು ಕೇಳಲು– ಧರ್ಮದತ್ತನು ''ಮೊದಲು ನಮ್ಮ ಕುಮಾರನು ಕಾಶಿಯಾತ್ರೆಯನ್ನು ಮಾಡಿಕೊಂಡು ಬರಲಿ, ಅನಂತರ ವಿವಾಹಕ್ಕೆ ಯೋಚನೆಯನ್ನು ಮಾಡೋಣ'' ಎಂದು ಹೇಳಿ ತನ್ನ ಭಾವಮೈದುನ (ಬಾಲಕನ ಸೋದರ ಮಾವ)ನನ್ನು ಕರೆದು ಜೊತೆಯಲ್ಲಿ ಹೋಗುವಂತೆ ತಿಳಿಸಲು–ಅವರಿಬ್ಬರೂ ಕಾಶೀ ಯಾತ್ರೆಗೆ ಪ್ರಯಾಣ ಬೆಳೆಸಿದರು.

ಶಿವ ಮತ್ತವನ ಸೋದರ ಮಾವ ಒಟ್ಟಾಗಿ ಪ್ರಯಾಣ ಮಾಡುತ್ತಾ ದಾರಿಯಲ್ಲಿ ಸಿಕ್ಕನೇಕ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸುತ್ತಾ ಅಲ್ಲಲ್ಲಿ ದೇವರ ದರ್ಶನವನ್ನು ಪಡೆಯುತ್ತಾ ಮುಂದೆ ಮುಂದೆ ಪ್ರಯಾಣ ಮಾಡುತ್ತಾ ದಾರಿಯಲ್ಲಿ ಒಂದು ಪ್ರತಿಷ್ಠಾನಗರವೆಂಬ ದೊಡ್ಡ ಪಟ್ಟಣವನ್ನು ತಲುಪಿದರು. ಆ ಪಟ್ಟಣದ ಮುಂದೆ ಒಂದು ಮನೋಹರವಾದ ಉದ್ಯಾವನವಿದ್ದಿತು. ಅಲ್ಲಿಗೆ ಅನೇಕ ಕನ್ನಿಕೆಯರು ವಿಹಾರಾರ್ಥವಾಗಿ ಬಂದು ಸೇರಿದ್ದರು. ಆ ಕನ್ನಿಕೆಯರಲ್ಲಿ ಪರಸ್ಪರ ಮನಸ್ತಾಪವುಂಟಾಗಿ ಒಬ್ಬರನ್ನೊಬ್ಬರು ಬಾಯಿಗೆ ಬಂದ ಹಾಗೆ ಬೈದುಕೊಳ್ಳುತ್ತಿದ್ದರು. ಅವರಲ್ಲಿ ಆ ದೇಶದ ದೊರೆ ಮಂಡೋರಾಯನ ಮಗಳು ಸುಶೀಲೆಯನ್ನು ರಾಜ್ಯಾಧಿಪತಿಯ ಮಗಳೆಂದೂ ಲೆಕ್ಕಿಸದೆ ಬೈಯ್ಯುತ್ತಿದ್ದಾಗ–ಸುಶೀಲೆ ಬೈಗಳನ್ನು ಕೇಳಿಸಿಕೊಂಡು 'ಎಲೆ ಸ್ನೇಹಿತಳೇ! ನನ್ನನ್ನು ನಿಷ್ಕಾರಣವಾಗಿ ಏಕೆ ಬೈಯುತ್ತೀಯೇ? ಇದರಿಂದ ನನಗೇನೂ ಆಗುವುದಿಲ್ಲ, ನಮ್ಮ ತಾಯಿ ಯಾವಾಗಲೂ ಮಂಗಳಗೌರೀ ವ್ರತವನ್ನು ಮಾಡುತ್ತಿರುತ್ತಾಳೆ. ಈ ವ್ರತ ಪ್ರಭಾವದಿಂದ ಸದಾ ಸುಮಂಗಲಿಯರಾಗಿಯೇ ಇರುವರು.

(ಮುಂದುವರಿಯುವುದು)

# ಸ್ಥಾನಿಕರು ಸ್ಥಳಿಕರಲ್ಲ

ಪ್ರತಿಕ್ರಿಯೆ

ಕೆಲವು ಕಡೆ ಕೆಲವು ಸ್ಥಾನಿಕರು ತಮ್ಮನ್ನು ಸ್ಥಳಿಕರೆಂದು ಕರೆದುಕೊಳ್ಳುವುದು ಕಾಣಿಸುತ್ತದೆ. ಉಡುಪಿಯ ಗುರುರಾಜ ಭಟ್ಟರ ವ್ಯಾಪಕವಾದ ಶಾಸನಗಳ ಅಧ್ಯಯನದಲ್ಲಿ ಸ್ಥಾನಿಕರನ್ನು ಎಲ್ಲಿಯೂ ಸ್ಥಳಿಕರೆಂದು ಗುರುತಿಸಿರುವುದು ಕಂಡು ಬಂದಿಲ್ಲ, ಸ್ಥಾನಿಕರೆಂಬ ಅಧಿಕಾರಿಗಳ ಉಲ್ಲೇಖ ಕೌಟಿಲನ (ಕೌಟಿಲ್ಯ ಎಂದು ತಪ್ಪಾಗಿ ಗುರುತಿಸಲ್ಪಟ್ಟವನ) ಅರ್ಥಶಾಸ್ತ್ರದಲ್ಲಿ ಲಭ್ಯವಿದೆ. ಈ ಶಬ್ದದ ವ್ಯುತ್ಪತ್ತಿ ಪಾಣಿನಿಯ ಅಷ್ಟಾಧ್ಯಾಯಿಯ ತದ್ಧಿತ ಪ್ರಕರಣದಲ್ಲಿ ಬರುವ ತತ್ರನಿಯುಕ್ತಃ ಎಂಬ ಸೂತ್ರದ ಪ್ರಕಾರವಾಗಿದೆ. ಸ್ಥಾನದಲ್ಲಿ ನಿಯುಕ್ತನಾದವನು, ಅಧಿಕರಿಸಲ್ಪಟ್ಟವನು ಎಂಬರ್ಥದಲ್ಲಿ ಸ್ಥಾನ ಶಬ್ದಕ್ಕೆ ಠಕ್ (ಇಕ) ಪ್ರತ್ಯಯ ಬಂದು ಸ್ಥಾನಿಕ ಎಂಬ ರೂಪ ಸಿದ್ಧವಾಗಿದೆ. ಇವನು ಜನಪದದ ಚತುರ್ಥಭಾಗದ ಅಧಿಕಾರಿ.

ಸ್ಥಾನಿಕರು ಸ್ಮಾರ್ತಬ್ರಾಹ್ಮಣರಲ್ಲಿ, ವೈಷ್ಣವ ಬ್ರಾಹ್ಮಣರಲ್ಲಿ, ಜೈನರಲ್ಲಿ, ಕಾಳಾಮುಖಶೈವರಲ್ಲಿ ಇದ್ದಾರೆ. ಕರ್ನಾಟಕದಾದ್ಯಂತ ಹೆಚ್ಚಿನ ಮಟ್ಟಿಗೆ ಸ್ಮಾರ್ತಸ್ಥಾನಿಕ ಬ್ರಾಹ್ಮಣರೇ ಕಾಣಸುತ್ತಾರೆ. ಮೂಲತಃ ಕಂದಾಯದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದ ಇವರಿಗೆ ಮುಂದೆ ಧಾರ್ಮಿಕ ಕ್ಷೇತ್ರದಲ್ಲೂ ವಿಶೇಷಾಧಿಕಾರ ದೊರೆಯಿತು. ಆದುದರಿಂದ ದೇವಸ್ಥಾನಗಳ ಆಡಳಿತವನ್ನೂ ನೋಡಿಕೊಳ್ಳಬೇಕಾಯಿತು. ಬ್ರಾಹ್ಮಣರೇ ಆದುದರಿಂದ ಅನೇಕ ದೇವಾಲಯಗಳಲ್ಲಿ ಅರ್ಚಕತ್ವವನ್ನು ನಿರ್ವಹಿಸಬೇಕಾಯಿತು.

ವೈಷ್ಣವ ಸ್ಥಾನಿಕರನ್ನು ಮೇಲುಕೋಟೆಯಲ್ಲಿ ನೋಡಬಹುದು. ಇಲ್ಲಿರುವ ನಾಲ್ಕು ಸ್ಥಾನಿಕ ಕುಟುಂಬಗಳೇ ಪರ್ಯಾಯವಾಗಿ ಚೆಲುವ ನಾರಾಯಣ ದೇವಾಲಯದ ಅರ್ಚಕತ್ವವನ್ನು ವಹಿಸುತ್ತವೆ.

ಮುಂದೆ ಕಾಲ ವಿಪರ್ಯಯದಿಂದ ದಕ್ಷಿಣ ಕನ್ನಡದ ಸ್ಥಾನಿಕರು ಹೀನ–ದೀನ ಸ್ಥಿತಿಗೆ ತಳ್ಳಲ್ಪಟ್ಟರು. ಈ ಅವಮಾನದಿಂದ ನೊಂದ ಕೆಲವರು ತಮ್ಮನ್ನು ಸ್ಥಳಿಕರೆಂದೋ, ಶಿವಬ್ರಾಹ್ಮಣರೆಂದೋ ಕರೆದುಕೊಳ್ಳತೊಡಗಿದರು. ಆದರೆ ಇಂದು ಸ್ಥಾನಿಕರಿಗೂ ತಮ್ಮ ಐತಿಹಾಸಿಕ ಮಹತ್ತ್ವದ ಅರಿವಾಗಿದೆ. ತಮ್ಮನ್ನು ಸ್ಥಾನಿಕರೆಂದು ತಲೆಯೆತ್ತಿ ಕರೆದುಕೊಳ್ಳಲು ನಾಚುತ್ತಿಲ್ಲ.

ಈಗ ಸ್ಥಳಿಕ ಶಬ್ದವನ್ನು ಪರಿಶೀಲಿಸೋಣ. ಇದೊಂದು ಶುದ್ಧ ಅಪಶಬ್ದ. ವ್ಯಾಕರಣ ಪ್ರಕಾರ ಈ ರೂಪವನ್ನು ಸಾಧಿಸಲು ಸಾಧ್ಯವೇ ಇಲ್ಲ. ಸ್ಥಲ(ಳ) ಶಬ್ದಕ್ಕೆ ಸ್ಥಲಕ್ಕೆ ಸಂಬಂಧಿಸಿದವನು ಎಂಬರ್ಥದಲ್ಲಿ ಠಕ್ (ಇಕ) ಪ್ರತ್ಯಯ ಬಂದರೆ ಸ್ಥಾಲಿಕ (ಸ್ಥಾಳಿಕ) ಎಂದಾದೀತೇ ಹೊರತು ಸ್ಥಲಿಕ (ಸ್ಥಳಿಕ) ಎಂದಲ್ಲ. ಇತಿಹಾಸಕ್ಕೂ, ವ್ಯಾಕರಣಕ್ಕೂ ವಿರುದ್ಧವಾದ ಸ್ಥಳಿಕ ಶಬ್ದವನ್ನೇಕೆ ಬಳಸಬೇಕೋ ಅರ್ಥವಾಗುವುದಿಲ್ಲ.

- ಕೆ. ಆತ್ಮಾರಾಮ ಶಾಸ್ತ್ರಿ, ಬೆಂಗಳೂರು

# ಮುದನೀಡಿದ 'ಸಮಕಾಲೀನ ಬೇತಾಳ ಪ್ರಶ್ನೆಗಳು'


ಪ್ರತಿಕ್ರಿಯೆ

ಅಕ್ಟೋಬರ್ 11ರ ಮಾಹೆಯ ನಮ್ಮ ಪತ್ರಿಕೆಯಲ್ಲಿನ ''ಸಮಕಾಲೀನ ಬೇತಾಳ ಪ್ರಶ್ನೆಗಳು'' ಲೇಖನ ಮುದ ನೀಡಿತು. ಶ್ರೀ ವೈ. ಶಂಕರನಾರಾಯಣ ರಾವ್ ಪಡುಬಿದ್ರಿ ಇವರಿಗೆ ನಮನಗಳು.

ಈ ವಿಡಂಬನೆ ಓದಿ ನನ್ನ ಮನಸ್ಸು ಹತ್ತಾರು ವರ್ಷಗಳ ಹಿಂದೆ ಓದಿ ಸುಧಾಪತ್ರಿಕೆಯಲ್ಲಿ ಓದಿದ್ದ ಇದೇ ರೀತಿಯ ಒಂದು ಲೇಖನ ನೆನಪಾಗಿ ಮನ ತುಂಬಿ ನಕ್ಕೆ. ಅದನ್ನು ತಮ್ಮಲ್ಲಿ ಹಂಚಿಕೊಳ್ಳುವ ಆಸೆ. ದಯವಿಟ್ಟು ಓದಿ (ತಮ್ಮ ಅಮೂಲ್ಯ ಸಮಯ ವ್ಯರ್ಥ ಮಾಡುತ್ತಿರುವುದಕ್ಕೆ ಕ್ಷಮೆ ಕೋರಿ) ಅದೂ ಕೂಡಾ ಹೊಸ ಬೇತಾಳನೇ. 'ಪಾಂಚಜನ್ಯ ಹೆಸರಿನ ಲೇಖಕರು ಬರೆಯುತ್ತಿದ್ದರು. ಒಂದು ವಾರದಲ್ಲಿ ಬೇತಾಳನ ಮಾತು ಹೀಗಿತ್ತು ''ನಾನು ಎಷ್ಟು ಸಾರಿ ತಪ್ಪಿಸಿಕೊಂಡು ಹೋದರೂ ನೀನು ಪುನಃ ಪುನಃ ಬಂದು ತಾಳ್ಮೆಯಿಂದ ನನ್ನನ್ನು ಹೊತ್ತುಕೊಂಡು ಹೋಗುತ್ತಿದ್ದೀಯ. ನಿನ್ನ ಈ ಪ್ರಾಮಾಣಿಕತೆಯನ್ನು ಕಂಡು ಸರ್ಕಾರಿ ನೌಕರರು ನಗಾಡುವುದಿಲ್ಲವೇ? ಒಂದು ಕತೆ ಹೇಳ್ತೀನಿ ಕೇಳು'' ಅಂತ ಪ್ರಾರಂಭಿಸಿತ್ತು.

ಪ್ರಕೃತಿ ನವನವೋನ್ಮೇಶಶಾಲಿನಿ ಅದರಂತೆ ಪರಂಪರೆಯಿಂದ ಬಂದ ಬೇತಾಳನೂ ಹೀಗೆ ಬದಲಾಗಲಿ, ಪ್ರತಿ ತಿಂಗಳೂ ಹೀಗೆ ಹೊಸ ರೀತಿ ಮೂಡಿ ಅದೃಶ್ಯನಾಗುತ್ತಿರಲಿ ಎಂದು ಆಶಿಸುತ್ತೇನೆ.

-ಕೆ.ಎಸ್.ರವೀಂದ್ರ ರಾವ್, ದೂರ್ವಾಸಪುರ ಅಂಚೆ, ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ.



ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು, ಕುಂಜಿಬೆಟ್ಟು, ಉಡುಪಿ ಇವರು ತಾ.18-09-2011ರಂದು ಸಂಜೆ ಬನ್ನಂಜೆ ನಾರಾಯಣಗುರು ಸಭಾಭವನದಲ್ಲಿ ಯಶಸ್ವಿಯಾಗಿ ಪ್ರದರ್ಶಿಸಿದ ಯಕ್ಷಗಾನ ಬಯಲಾಟ ''ಮಾಯಾಪುರಿ ಮಹಾತ್ಮೆ–ವೀರಮಣಿ ಕಾಳಗ''

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ದೀಪಾವಳಿ ಸಂಭ್ರಮ




ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ.30-10-11ರ ಆದಿತ್ಯವಾರದಂದು ದೀಪಾವಳಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಸಂಜೆ 6-15ಕ್ಕೆ ಪ್ರಾರಂಭವಾದ ಕಾರ್ಯಕ್ರಮಕ್ಕೆ ಶ್ರೀಯುತ ರಘುನಾಥ್ ರಾವ್ ಹಾಗೂ ಶ್ರೀ ರಾಮಕೃಷ್ಣ ಪೆರ್ವಾಜೆಯವರು ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು. ಶ್ರೀಮತಿ ರಜನಿ ಸಂತೋಷ್‌ಕುಮಾರ್‌ರವರ ಭಕ್ತಿಪೂರ್ವಕ ಪ್ರಾರ್ಥನೆ ಬಳಿಕ ಮಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಎಂ. ಆರ್. ವಾಸುದೇವರವರು ದೀಪಾವಳಿ ಆಚರಣೆಯ ಬಗ್ಗೆ ಚಿಂತನೆ ನಡೆಸಿದರು. ಹಳೆಯ ಆಚರಣೆ ಹಾಗೂ ಇಂದಿನ ಆಚರಣೆಗಳ ಬಗ್ಗೆ ಉತ್ತಮವಾಗಿ ವಿಶ್ಲೇಷಿಸಿದ ಅವರು ಇಂತಹ ಕಾರ್ಯಕ್ರಮಗಳಿಂದ ಸಮಾಜದಲ್ಲಿ ಬಾಂಧವ್ಯಗಳು ವೃದ್ಧಿಯಾಗಿ ಮುಂದಿನ ಜನಾಂಗಕ್ಕೆ ಮಾದರಿಯಾಗುವುದೆಂದು ತಿಳಿಸಿದರು. ನಂತರ ಕು। ಪ್ರೇರಣಾ ಹಾಗೂ ಕು। ಪ್ರಾರ್ಥನಾ ಅದ್ಭುತವಾದ ನೃತ್ಯದ ಮೂಲಕ ಸಮಾಜ ಬಾಂಧವರನ್ನು ರಂಜಿಸಿದರು. ಶ್ರೀ ಪಿ. ಶ್ರೀಕಾಂತ್‌ರಾವ್‌ರವರು ನಡೆಸಿದ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗವಹಿಸಿದ ಸಮಾಜ ಬಾಂಧವರು ಸರಿಯಾದ ಉತ್ತರ ನೀಡಿ ಬಹುಮಾನ ಪಡೆದರು. ನಂತರ ನಡೆದ ವಿನೋದಾತ್ಮಕ ಆಟಗಳು ಸರ್ವರನ್ನು ನಗೆಗಡಲಲ್ಲಿ ತೇಲಾಡಿಸಿದವು. ಯುವ ವೇದಿಕೆಯ ಉಪಾಧ್ಯಕ್ಷರಾದ ಶ್ರೀ ನಾಗರಾಜ್ ಶರ್ಮ, ಶ್ರೀ ಸೋಮಶೇಖರ್ ಹಾಗೂ ಶ್ರೀ ವಿನೋದ ರಾವ್ ಈ ಆಟಗಳ ವ್ಯವಸ್ಥೆಯಲ್ಲಿ ಸಹಕರಿಸಿದರು. ಕುಮಾರಿ ವಂದನಾ ರಾವ್ ಮತ್ತು ಪುಟಾಣಿ ಪೂರ್ವಿ ಆಕರ್ಷಕ ನೃತ್ಯದ ಮೂಲಕ ತಮ್ಮ ಕಲಾ ಪ್ರೌಢಿಮೆಯನ್ನು ಮೆರೆದರು. ಸಾಂಪ್ರದಾಯಿಕ ಉಡುಗೆ ಸ್ಪರ್ಧೆ, ಪುರುಷರು, ಮಹಿಳೆಯರು ಹಾಗೂ ಮಕ್ಕಳ ವಿಭಾಗಗಳಲ್ಲಿ ನಡೆದು ಭಾಗವಹಿಸಿದವರೆಲ್ಲಾ ವಿನೂತನ ಶೈಲಿಯಲ್ಲಿ ಮಾರ್ಜಾಲ ನಡಿಗೆಯನ್ನು ನಡೆದು, ಜಿದ್ದಾಜಿದ್ದಿನ ಸ್ಪರ್ಧೆ ನೀಡಿ ಬಹುಮಾನ ಗೆದ್ದರು. ದೀಪಾವಳಿಯ ವಿನೂತನ ಪ್ರಯೋಗವಾದ ಸದಸ್ಯರು ಮನೆಯಲ್ಲೇ ತಯಾರಿಸುವ ಖಾದ್ಯಗಳ ಭೋಜನಕ್ಕೆ ಅಡುಗೆ ತಯಾರಿಸಿದ ಮಹಿಳೆಯರನ್ನು ಶ್ರೀಮತಿ ಸುಮಂಗಲಾ ಪ್ರಭಾಕರ್, ಶ್ರೀಮತಿ ಕನಕವಲ್ಲಿ ಹರ್ಷಕುಮಾರ್ ಹಾಗೂ ಶ್ರೀಮತಿ ಜಯಂತಿ ವಿನೋದ್‌ರಾವ್, ಪಟಾಕಿ, ಬಹುಮಾನ ಹಾಗೂ ಐಸ್‌ಕ್ರೀಂ ಪ್ರಾಯೋಜಿಸಿದವರನ್ನು ಶ್ರೀ ನಾಗರಾಜ್ ಶರ್ಮ ಹಾಗೂ ಶ್ರೀ ಮನೀಷ್ ರಾವ್‌ರವರು ಗುಲಾಬಿ ನೀಡುವ ಮೂಲಕ ಅಭಿನಂದಿಸಿದರು.

ದೀಪಾವಳಿಯ ಶೋಭೆಯನ್ನು ಹೆಚ್ಚಿಸುವಲ್ಲಿ ಶ್ರೀ ಸದಾಶಿವ ಶಾಸ್ತ್ರಿ, ಮಾ। ಪ್ರತೀಕ್ ಶರ್ಮಾ, ಮಾ। ಸುಹಾಸ್ ರಾವ್ ಹಾಗೂ ಮಾ। ಸನತ್‌ರವರು ಸ್ವಯಂ ನಿರ್ಮಿತ ಗೂಡುದೀಪಗಳನ್ನು ತಂದು, ಶ್ರೀ ಉಮಾಕಾಂತ ಶರ್ಮರು ವಿದ್ಯುತ್ ದೀಪಗಳನ್ನು ಪ್ರಾಯೋಜಿಸಿ ಹಾಗೂ ಶ್ರೀ ನಾಗರಾಜ್ ಶರ್ಮ ಮತ್ತು ರಘುವೀರ್ ಪೆರ್ಡೂರುರವರು ದೀಪದ ಸುತ್ತ ಚಿತ್ತಾಕರ್ಷಕ ರಂಗೋಲಿಯನ್ನು ಮೂಡಿಸಿ ಸರ್ವರ ಮೆಚ್ಚುಗೆಗೆ ಪಾತ್ರರಾದರು. ಯುವಕರು ಹಾಗೂ ಮಕ್ಕಳು ಪಟಾಕಿ ಸಿಡಿಸಿ ದೀಪಾವಳಿ ಆಚರಣೆಗೆ ಪರಿಪೂರ್ಣತೆ ತಂದರು. ದಾಂಡಿಯಾ ನೃತ್ಯದಲ್ಲಿ ವಯಸ್ಸಿನ ಭೇದವಿಲ್ಲದೆ ಎಲ್ಲರೂ ಕುಣಿದು ಸಂತಸಪಟ್ಟರು. ವಿಶೇಷ ಖಾದ್ಯಗಳ ಅಡುಗೆಯನ್ನು ಉಣಬಡಿಸುವ ವ್ಯವಸ್ಥೆಯಲ್ಲಿ ಶ್ರೀ ಅನಿಲ್ ಕುಮಾರ್ ಬಿ.ಎಸ್., ಶ್ರೀ ಮುರಳೀಧರ ರಾವ್ ಹಾಗೂ ಶ್ರೀ ಚೇತನ್ ಶರ್ಮಾರವರೊಡನೆ ಇತರರು ಕೈಜೋಡಿಸಿದರು.


ಶ್ರೀ ಸುಬ್ರಹ್ಮಣ್ಯ ಸದನದ ಖಜಾಂಚಿ ಶ್ರೀ ಪಿ. ಶ್ರೀಕಾಂತ ರಾವ್ ಹಾಗೂ ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಅರುಣಾ ಸೋಮಶೇಖರ್‌ರವರ ಸಂಯೋಜನೆ ಹಾಗೂ ನಿರ್ವಹಣೆಯಲ್ಲಿ ನಡೆದ ದೀಪಾವಳಿ ಕಾರ್ಯಕ್ರಮ ಅಚ್ಚುಕಟ್ಟುತನ ಮನೋರಂಜನಾತ್ಮಕ ಹಾಗೂ ವಿಜೃಂಭಣೆಯಿಂದ ನಡೆದು ಯಶಸ್ವಿಯಾಯಿತು.

**ಸಾಂಪ್ರದಾಯಿಕ ಉಡುಗೆ ಸ್ಪರ್ಧೆಯಲ್ಲಿ ಬಹುಮಾನ ಪಡೆದವರು :**

15 ವರುಷದ ಕೆಳಗಿನ ಮಕ್ಕಳ ವಿಭಾಗ (ತನುಶ್ರೀ), 15 ವರುಷದ ಮೇಲಿನ ಮಹಿಳೆಯರ ವಿಭಾಗ (ಪ್ರಥಮ-ಶ್ರೀಮತಿ ಆಶಾ ಕುಮಾರ ಸ್ವಾಮಿ, ದ್ವಿತೀಯ-ಪ್ರೀತಿಕಾ ರಾವ್ ಕೇದಗೆ), 15 ವರುಷದ ಮೇಲಿನ ಪುರುಷರ ವಿಭಾಗ (ಪ್ರಥಮ-ಶ್ರೀ ಮನಿಷ್ ರಾವ್, ದ್ವಿತೀಯ-ಶ್ರೀ ವರುಣ್ ರಾವ್ ಕೆ.)

ವರದಿ : **ಶ್ರೀ ಪಿ. ಶ್ರೀಕಾಂತ ರಾವ್**

# ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾ : ಋಗ್‌ಉಪಾಕರ್ಮ ಆಚರಣೆ




ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ.09-09-2011ರಂದು ಋಗುಪಾಕರ್ಮ ನೆರವೇರಿತು. ಪಾವಂಜೆ ಶ್ರೀ ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ ಹೋಮ ಹವನಗಳು ನಡೆದವು. ಸಭಾದ ಪದಾಧಿಕಾರಿಗಳಾದ ಶ್ರೀ ಕರುಣಾ ಬೆಳ್ಳೆ, ಅನಿಲ್‌ರಾವ್ ಬಿ.ಎಸ್., ಪಿ.ಶ್ರೀಕಾಂತ ರಾವ್ ಹಾಗೂ ಸಲವಾರು ಸಮಾಜ ಬಾಂಧವರು ಉಪಸ್ಥಿತರಿದ್ದರು.

ವರದಿ : **ಶ್ರೀ ಪಿ. ಶ್ರೀಕಾಂತ ರಾವ್**

# ಶ್ರೀ ಸುಬ್ರಹ್ಮಣ್ಯ ಸಭಾ : ನಾಡಹಬ್ಬ ಆಚರಣೆ

ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನಾಡಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಲಲಿತ ಸಹಸ್ರನಾಮ ಪಾರಾಯಣದೊಂದಿಗೆ ಪ್ರಾರಂಭವಾದ ಕಾರ್ಯಕ್ರಮ ಛದ್ಮವೇಷ ಸ್ಪರ್ಧೆ, ಭಕ್ತಿಗೀತೆ ಸ್ಪರ್ಧೆ, ಹೂ ಕಟ್ಟುವ ಸ್ಪರ್ಧೆ, ಚಿತ್ರ ಬಿಡಿಸುವ ಸ್ಪರ್ಧೆ ಹಾಗೂ ಸೀರೆಯ ಮೌಲ್ಯ ಊಹನಾ ಸ್ಪರ್ಧೆಯೊಂದಿಗೆ ಮುಂದುವರಿಯಿತು. ನಂತರ ಕೊಡ್ಲು ವಿಷ್ಣು ಶ್ಯಾನುಭೋಗ್‌ರವರು ಸ್ಥಾಪಿಸಿದ




ವಿದ್ಯಾನಿಧಿಯಿಂದ ಇಬ್ಬರಿಗೆ ವೈದ್ಯಕೀಯ ವಿದ್ಯಾರ್ಥಿ ವೇತನವನ್ನು ನೀಡಲಾಯಿತು. ದಿ। ಕೆ. ಭಾಗೀರಥೀ ದಾಮೋದರ ಶಾಸ್ತ್ರಿ ಪ್ರತಿಷ್ಠಾನದಿಂದ ಹಲವಾರು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಲಾಯಿತು. ಪುಟಾಣಿ ಪೂರ್ವಿ ಅತ್ಯುತ್ತಮ ಕಥಕ್ ನೃತ್ಯ ಪ್ರದರ್ಶನ ವನ್ನು ನೀಡಿದಳು. ಭೋಜನದ ನಂತರ ಶ್ರೀ ಸರಯೂ ಯಕ್ಷ ಬಾಲ ವೃಂದ, ಕೋಡಿಕಲ್ ಇವರ ವತಿಯಿಂದ ಯಕ್ಷಗಾನದಲ್ಲಿ ಅಪ್ರತಿಮ ಸಾಧನೆ ಮಾಡಿದ ಶ್ರೀಯುತ ನಾಗರಾಜ್ ವರ್ಕಾಡಿಯನ್ನು ಪ್ರಶಸ್ತಿ ಪತ್ರ, ಸ್ಮರಣಿಕೆ ಹಾಗೂ ಫಲಪುಷ್ಪಗಳೊಂದಿಗೆ ಸನ್ಮಾನಿಸಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಶ್ರೀ ಸುಬ್ರಹ್ಮಣ್ಯ ಯಕ್ಷಗಾನ ಮಂಡಳಿಯ ಕಲಾವಿದರಿಂದ ''ಕುಶ ಭೂಪಾಲ ವಿಜಯ'' ಯಕ್ಷಗಾನ ಪ್ರದರ್ಶನವನ್ನು ನಡೆಸಲಾಯಿತು. ಶ್ರೀ ಪಿ. ಶ್ರೀಕಾಂತ್‌ರಾವ್, ಶ್ರೀ ನಾಗರಾಜ್ ವರ್ಕಾಡಿ ಕಾರ್ಯಕ್ರಮ ನಿರ್ವಹಿಸಿದರು ಶ್ರೀಮತಿ ಅರುಣಾ ಸೋಮಶೇಖರರವರು ಕಾರ್ಯಕ್ರಮ ಸಂಯೋಜಿಸಿದರು. ಬಹುಮಾನ ವಿತರಣೆ, ವಂದನಾರ್ಪಣೆ, ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಆ ಪ್ರಯುಕ್ತ ಹಿರಿಯ ಯಕ್ಷಗಾನ ವೇಷಭೂಷಣ ತಯಾರಕ ಶ್ರೀ ಜಗನ್ನಾಥ ರಾವ್‌ರವರನ್ನು ಸನ್ಮಾನಿಸಲಾಯಿತು. ಶ್ರೀ ಅನಿಲ್ ರಾವ್ ಬಿ.ಎಸ್. ಮತ್ತು ಪುಷ್ಪಲತಾ ಬಿ. ರಾವ್‌ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವರದಿ : **ಶ್ರೀ ಪಿ. ಶ್ರೀಕಾಂತ ರಾವ್**

# ಪೆರ್ನೆ ವಸಂತಬೆಟ್ಟು : ನವರಾತ್ರಿ ಪ್ರಯುಕ್ತ ಭಜನಾ ಕಾರ್ಯಕ್ರಮ




ನವರಾತ್ರಿಯ ಪ್ರಥಮ ದಿನ ಪೆರ್ನೆ ಮಠಂತಬೆಟ್ಟು ಶ್ರೀ ರಾಜರಾಜೇಶ್ವರಿ ಕ್ಷೇತ್ರದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ವತಿಯಿಂದ ಭಜನಾ ಕಾರ್ಯಕ್ರಮ ನಡೆಯಿತು. ಶ್ರೀ ಪಿ. ಶ್ರೀಕಾಂತ ರಾವ್, ಶ್ರೀಮತಿ ಅರುಣಾ ಸೋಮಶೇಖರ್ ಹಾಗೂ ಶ್ರೀಮತಿ ವೇದಾವತಿ ಕಾರ್ಯಕ್ರಮ ಸಂಯೋಜಿಸಿದರು. ಸಭಾದ ಹಲವಾರು ಸದಸ್ಯರು ಪಾಲ್ಗೊಂಡಿದ್ದರು.

ವರದಿ : **ಶ್ರೀ ಪಿ. ಶ್ರೀಕಾಂತ ರಾವ್**

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

ಶ್ರೀಯುತ ಕೊಡ್ಲು ವಿಷ್ಣು ಶ್ಯಾನುಭಾಗರು ತಮ್ಮ ಪುತ್ರ ದಿ। ಕೊಡ್ಲು ಕೇಶವ ಶ್ಯಾನುಭಾಗರ ಸ್ಮರಣೆಯಲ್ಲಿ ರೂ.60,000/-ದ ನಿಧಿಯನ್ನು ಸ್ಥಾಪಿಸಿ ಪ್ರತಿ ವರ್ಷ CA ಕಲಿಯುವ ನಮ್ಮ ಸಮಾಜದ ಒಬ್ಬ ಪ್ರತಿಭಾವಂತ ವಿದ್ಯಾರ್ಥಿಗೆ ರೂ.5,000/- ಸಹಾಯಧನವನ್ನು ಕೊಡಲು ಉದ್ದೇಶಿಸಿರುವರು. 2011-12ನೇ ಸಾಲಿಗೆ ಈ ಸಹಾಯಧನವನ್ನು ಪಡೆಯಲು CA ಕಲಿಯುವ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಂದ ದಿನಾಂಕ 20-12-2011ರ ಒಳಗೆ ಶ್ರೀ ಸಭೆಯ ಕಾರ್ಯದರ್ಶಿಗೆ ತಲುಪುವಂತೆ ಬಿಳಿ ಹಾಳೆಯಲ್ಲಿ ಅರ್ಜಿಯನ್ನು ಬರೆದು ಕಲಿಕಾ ಪ್ರಮಾಣಪತ್ರದೊಂದಿಗೆ ಸಲ್ಲಿಸಲು ಕೋರಲಾಗಿದೆ.

**- ಕರುಣ್‌ರಾವ್ ಬೆಳ್ಳೆ, ಕಾರ್ಯದರ್ಶಿ**

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ। ಪ್ರೊ। ಗುರುರಾಜ ಭಟ್ಟರ
ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

**ತುಳುನಾಡಿನ ಬ್ರಾಹ್ಮಣರ ವರ್ಗೀಕರಣ :**

ಬ್ರಾಹ್ಮಣರಲ್ಲಿ ಮೊದಲಿಗರಾದ ತುಳುನಾಡಿನಲ್ಲಿ ಬ್ರಾಹ್ಮಣ್ಯವನ್ನು ಪ್ರಥಮ ಬಿತ್ತರಿಸಿದ ಸ್ಥಾನಿಕ ಬ್ರಾಹ್ಮಣರು ಕ್ರಿ.ಪೂ.2ನೇ ಶತಮಾನ ಕ್ಕಿಂತಲೂ ಮುಂಚಿತವಾಗಿ ಇಲ್ಲಿಗೆ ಬಂದಂತೆ ಕಂಡು ಬರುತ್ತದೆ. ಇವರು ಪ್ರಧಾನವಾಗಿ ಋಗ್ವೇದಿಗಳು, ಆಶ್ವಲಾಯನ ಸೂತ್ರದವರು ಮತ್ತು ಸ್ಮಾರ್ತ ಬ್ರಾಹ್ಮಣರು. ಚರಿತ್ರೆ ತಿಳಿಸುವಂತೆ ಇವರು ತುಳುನಾಡಿನ ದೇವಳದ ಅಧಿಕಾರಿಗಳಾಗಿದ್ದು (ಕ್ರಿ.ಶ.15ನೇ ಶತಮಾನದವರೆಗೆ) ಶೃಂಗೇರಿ ಮಠದ ಶಿಷ್ಯರಾಗಿರುವವರು. ಶೃಂಗೇರಿ ಜಗದ್ಗುರು ಮಠಕ್ಕೆ ತುಳುವವೂ ಸೇರಿತ್ತು ಎಂಬುದು ನಿರ್ವಿವಾದ. ಸ್ಥಾನಿಕರ ಈ ಮಠದ ಶಿಷ್ಯತ್ವವು ಇಂದು ನಿನ್ನೆಯದಲ್ಲ, ಹಳಗಾಲದ್ದು ಎಂಬುದನ್ನು ತಿಳಿದುಕೊಳ್ಳಬೇಕು. ಆನಂದಗಿರಿ ವಿರಚಿತ ಶಂಕರ ದಿಗ್ವಿಜಯದಲ್ಲಿ ಹಸ್ತಾಮಲಕಾಚಾರ್ಯರು ಪಶ್ಚಿಮಕರಾವಳಿಗೆ ಬಂದು ಸ್ಮಾರ್ತತತ್ವಕ್ಕನುಗುಣವಾದ ವೈಷ್ಣವ ಧರ್ಮವನ್ನು ಪ್ರಚಾರ ಮಾಡಿದ ಉಲ್ಲೇಖವಿದೆ. ರಜತಪೀಠದಲ್ಲಿ (ಉಡುಪಿ) ಶ್ರೀಕೃಷ್ಣನನ್ನು ಪ್ರತಿಷ್ಟಿಸಿದರೆಂದೂ ಅದರಲ್ಲಿದೆ.

"ಹಸ್ತಾಮಲಕಸ್ತು ಭೂಮಧ್ಯಾತ್ ಪಶ್ಚಿಮ ಖಂಡ ದಿಗ್ವಿಜಯಂಕೃತ್ವಾ। ಪಂಚಮುದ್ರಾಂಕ ವಿರಾಜಿತಾನ್। ಭಗವದಷ್ಟಾಕ್ಷರ ಮಂತ್ರ ಜಪಾಸತ್ತಾನ್। ಕಾಂಶ್ಚಿತ್ ಬ್ರಾಹ್ಮಣಾದೀನ್ ಕೃತ್ವಾ। ರಜತಪೀಠಾದಿಸ್ಥಲೇಶು ಕೃಷ್ಣಾದಿ ದೇವತಾಪ್ರತಿಮಾಂ ಕೃತ್ವಾ। ಮಠಂ ವಿಜ್ಞಾಪಯಿತುಂ ಪುನಃ ಪರಮಗುರುಂ ಪ್ರಾಪ। ದೃಷ್ಟ್ವಾ ತದಾನೀ ಕಾಂಚ್ಯಾಂ ಪರಮ ಗುರುಂ ಶಂಕರಾಚಾರ್ಯ ನತ್ವಾತತ್। ಪಾದಯುಗಳೇ ಸ್ವಕೃತಂ ವಿಜ್ಞಾಪಯಾಮಾಸ।"

ಈ ಸ್ಥಾನಿಕರಲ್ಲಿ ಇತರ ಬ್ರಾಹ್ಮಣರಲ್ಲಿರುವಂತೆ ಬೇರೆ ಬೇರೆ ಕುಲನಾಮಗಳು ಕಂಡು ಬರುವುದಿಲ್ಲ. ತಮ್ಮ ಹೆಸರುಗಳ ಅಂತ್ಯದಲ್ಲಿ ಇವರು ದಕ್ಷಿಣ ಹಿಂದೂ ದೇಶದಲ್ಲಿ ಸಾರ್ವತ್ರಿಕವಾಗಿ ಬ್ರಾಹ್ಮಣರಲ್ಲಿ ಕಂಡು ಬರುವ ಪ್ರತ್ಯಯಗಳನ್ನೂ ಇರಿಸಿಕೊಂಡದ್ದನೇ ಕಂಡುಬರುತ್ತದೆ.

1) ಜೀಯ-ತಮ್ಮಣ್ಣ ಜೀಯ, ಮಲ್ಲಜೀಯ, ಸೋಮಜೀಯ 2) ಅಣ್ಣ-ದೇವಣ್ಣ, ಪುಟ್ಟಣ್ಣ, ಚಿಕ್ಕಣ್ಣ 3) ಅಯ್ಯ-ಬಾಯಿರಯ್ಯ, ಸೋಮಯ್ಯ, ಕೃಷ್ಣಯ್ಯ 4) ಅಪ್ಪ-ರಂಗಪ್ಪ, ದೇವಪ್ಪ, ವೆಂಕಟಪ್ಪ, ಅಪ್ಪಾಜಿ 5) ಶಾಸ್ತ್ರಿ-ಕೃಷ್ಣ ಶಾಸ್ತ್ರಿ, ಶಾಮ ಶಾಸ್ತ್ರಿ ವಿಷ್ಣು ಶಾಸ್ತ್ರಿ 6) ಶರ್ಮ-ರಾಮಶರ್ಮ, ಗೋವಿಂದ ಶರ್ಮ, ರವಿಶರ್ಮ 7) ಓಜ-ನಟ್ಟೋಜ, ಮರೋಜ 8) ಜೋಯಿಸ-ಪದ್ಮನಾಭ ಜೋಯಿಸ, ಕೃಷ್ಣ ಜೋಯಿಸ, ಶಂಕರ ಜೋಯಿಸ.

ಅಖಿಲ ಕರ್ನಾಟಕದಲ್ಲಿ ಶಾಸನಗಳ ಆಧಾರದಿಂದ ಈ ಸ್ಥಾನಿಕರು ಆಚಾರ್ಯ, ಪಂಡಿತ, ರಾಜಗುರು, ಒಡೆಯರು, ದೀಕ್ಷಿತ, ಸಮಯ ಚಕ್ರವರ್ತಿ, ತತ್ವಪದ, ಶಿವಶಕ್ತಿ ಎಂಬ ಹೆಸರುಗಳನ್ನು ಇರಿಸಿಕೊಂಡಿದ್ದರೆಂಬುದು ಸ್ಪಷ್ಟ ತಿಳಿಯುತ್ತದೆ.

ಈ ಗೋರಾಷ್ಟ್ರವು ಉತ್ತರದಲ್ಲಿ ಗೋಕರ್ಣದಿಂದ, ದಕ್ಷಿಣದಲ್ಲಿ ಮಲೆಯಾಳದವರೆಗೆ ವಿಸ್ತೃತವಾದುದರಿಂದಲೂ, ಹವಿಕರೂ ತುಳು ಬ್ರಾಹ್ಮಣರೆಂದೇ (ತೌಳವ ಬ್ರಾಹ್ಮಣರು) ಪರಿಗಣಿಸಲ್ಪಡುವುದು ವಿಹಿತ. ಉತ್ತರ ಕನ್ನಡ ಜಿಲ್ಲೆಯು ಹವಿಕ ದೇಶವಾಗಿದೆ. ಇದನ್ನು 'ಹೈಗ'ವೆಂದು ಕರೆಯುತ್ತಾರೆ. ಈ ಹವಿಕರು (ಹವ್ಯಕವೆಂಬ ಹೆಸರು ಅಷ್ಟೊಂದು ಸರಿಯಲ್ಲವೆಂದೂ ನನ್ನ ಅಭಿಪ್ರಾಯ) ತುಳುನಾಡಿಗೆ ಎರಡನೆಯ ಕಂತಿನಲ್ಲಿ ಮೂರನೆಯ ಶತಮಾನದಲ್ಲಿ ಬಂದು ನೆಲೆನಿಂತವರು.

"ಇವರ ಸಾಮಾಜಿಕ ರೀತಿ ನೀತಿಗಳು ಮತ್ತು ಧರ್ಮ ನಿರ್ಣಯ, ವೃತ್ತಿ ಕಲ್ಪನೆ ಮುಂತಾದುವುಗಳಲ್ಲಿ ರಾಜನು ಕೈ ಹಾಕುವಂತಿರಲಿಲ್ಲ. ಬ್ರಾಹ್ಮಣ ಪ್ರಮುಖನಾದ ಭಟ್ಟಾಚಾರ್ಯನ ಸಲಹೆ ಮತ್ತು ಸೂಚನೆಯಂತೆ ಲೋಕಾದಿತ್ಯನೇ ಇವರಿಗೆ ಅಧಿಕಾರಗಳನ್ನು ವಿಂಗಡಿಸಿ, ಸಂಕೇತನಾಮಗಳನ್ನು ಕೊಟ್ಟನು. ಸಭಾಹಿತ, ಮಧ್ಯಸ್ಥ, ಯಾಜೀ, ಅವಭೃಥ, ಭಟ್ಟ, ತಾಂತ್ರಿಕ, ಪ್ರಭು-ಇವೇ ಏಳು ಸಂಕೇತಗಳು.


1. ಸಭಾಹಿತ-ಇವನು ಸಭಾ ಮಧ್ಯದಲ್ಲಿ ಅಧ್ಯಕ್ಷನಾಗಿದ್ದು, ಧರ್ಮಾದರ್ಮಗಳ ವಿಚಾರಣೆ ನಡೆಸಿ ನಿರ್ಣಯ ಹೇಳುವವನು (ಜಡ್ಜ್). 2. ನ್ಯಾಯ ವಿಚಾರ ಸಮಯದಲ್ಲಿ ಮಧ್ಯಸ್ಥನಾಗಿ ನಿಂತು ವಿಷಯಗಳನ್ನು ಮಂಡಿಸು ವವನು (ಲಾಯರ್). 3. ಯಾವಾಗಲೂ ಯಜ್ಞ ದೀಕ್ಷಿತನಾಗಿರು ವವನೇ 'ಯಾಜೀ' (ದೀಕ್ಷಿತ) 4. ಯಜ್ಞಾಂತಾವಭೃಥಾಸ್ನಾನ ಕರ್ತನೇ 'ಅವಭೃಥ'ನು. 5. ವೇದ ಶಾಸ್ತ್ರ ನಿಪುಣನಾದ, ಪೂರ್ವಾಪರ ಕರ್ಮಕಾಂಡ ಕುಶಲನೇ (ಭಟ್ಟ) 6. ವೈದಿಕ, ಆಗಮ, ತಂತ್ರಗಳಲ್ಲಿ ಪ್ರವೀಣನೇ 'ತಾಂತ್ರಿಕ'ನು 7. ಇವರೆಲ್ಲರಿಗೂ ಒಡೆಯನಾಗಿ ಇವರಿಗಿರುವ ಅನುಕೂಲ ಅನಾನುಕೂಲತೆಗಳನ್ನು ತಿಳಿದು ಯೋಗ್ಯ ವ್ಯವಸ್ಥೆ ಮಾಡುವವನೇ 'ಪ್ರಭು' (ಹೆಗ್ಗಡೆ)

ಹವಿಕ ಬ್ರಾಹ್ಮಣರ ಮೂಲಕ್ಕೆ ಸೇರಿದ ಒಂದು ವಿಭಾಗವು ಸಕಲಪುರಿ ಬ್ರಾಹ್ಮಣ ವರ್ಗ. ಇವರು ಹವಿಕರಿಂದ ಮತಸಂಬಂಧವಾದ ಮತ್ತು ಸಾಮಾಜಿಕ ಬಿಕ್ಕಟ್ಟಿನಿಂದಾದ ವಿಭಿನ್ನತಿಯನ್ನು ಹೊಂದಿ, ಪ್ರತ್ಯೇಕವಾದಂತೆ ಕಂಡು ಬರುತ್ತದೆ. ಇವರು ರಾಮಚಂದ್ರಪುರದ ಅಧಿಪತ್ಯವನ್ನೊಪ್ಪುವುದಿಲ್ಲ. ಸಕಲಪುರಿ ಎಂಬ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಗಡಿಯಲ್ಲಿರುವ ಅವರದ್ದೇ ಆದ ಮಠದ ನೇತೃತ್ವದಲ್ಲಿ ತಮ್ಮ ಕಾರ್ಯಗಳನ್ನು ಎಸಗುತ್ತಾರೆ. ಸಹ್ಯಾದ್ರಿ ಖಂಡದಲ್ಲಿ ಇವರನ್ನು ವಿಧವಾಪುತ್ರರೆಂದು, ಆ ಕಾರಣದಿಂದ ಪತಿತ ಬ್ರಾಹ್ಮಣರೆಂದು 'ತೇಷಾಂ ಸಂಸರ್ಗ ಮಾತ್ರೇಣ ಪಾತಿತ್ಯ ಮನಗಚ್ಛತಿ'-ಇವರ ಸಂಸರ್ಗ ಮಾತ್ರದಿಂದ ಪಾತಿತ್ಯ ಲಭಿಸುವುದೆಂದೂ ಹೇಳಿದೆ.

(ಮುಂದುವರಿಯುವುದು)

**'ತುಳುನಾಡಿನಲ್ಲಿ ಬ್ರಾಹ್ಮಣ್ಯ' ಈ ಪುಸ್ತಕ ಇಲ್ಲಿ ಲಭ್ಯ :**
**ಡಾ। ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್ (ರಿ.), #10-2-87B1, ಮೊದಲನೆಯ ಮಹಡಿ, ಎಸ್.ಎಮ್.ಎಸ್.ಪಿ. ಸಂಕೀರ್ಣ, ಸಂಸ್ಕೃತ ಕಾಲೇಜ್ ಬಳಿ, ಉಡುಪಿ-576101, ಕರ್ನಾಟಕ**

# ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಶೃಂಗೇರಿ ಶ್ರೀಶಾರದಾ ಪೀಠದ ಕೊಡುಗೆ



- ಡಾ। ಎಚ್.ವಿ.ನರಸಿಂಹಮೂರ್ತಿ,
ವಿಶ್ರಾಂತ ಪ್ರಾಧ್ಯಾಪಕರು
ಕುಂದಾಪುರ-576 201.

(ಹಿಂದಿನ ಸಂಚಿಕೆಯಿಂದ)

ಶಾಂಕರ ಸಿದ್ಧಾಂತ ಮತ್ತು ಸನಾತನ ಧರ್ಮದ ಪ್ರಚಾರಕ್ಕೋಸ್ಕರ ಆದಿಶಂಕರರು ಸ್ಥಾಪಿಸಿದ ಶೃಂಗೇರಿ ಶ್ರೀಶಾರದಾ ಪೀಠದೊಂದಿಗೆ ಆಸ್ತಿಕ ಮಹಾಜನತೆಯ ಸಂಪರ್ಕ ನಿರಂತರವಾಗಿ ಉಳಿದು ಬರಬೇಕು ಎಂಬ ಉದ್ದೇಶದಿಂದ ವಿಕೇಂದ್ರೀಕರಣ ತತ್ತ್ವವನ್ನು ಅನುಸರಿಸಿ, ಜಗದ್ಗುರುಗಳವರು ಅಲ್ಲಲ್ಲಿ ಧರ್ಮಾಧಿಕಾರಿಗಳನ್ನು ಮತ್ತು ಮಠ ಮುದ್ರಾಧಿಕಾರಿಗಳನ್ನು ನಿಯೋಜಿಸಿದ್ದಾರೆ.

ಇವರು ಜಗದ್ಗುರು ಗಳವರು ತಮ್ಮ ಪ್ರಾಂತಕ್ಕೆ ಬಂದಾಗಲೆಲ್ಲ ಅವರ ಧರ್ಮಯಾತ್ರೆಗೆ ಸೂಕ್ತ ವ್ಯವಸ್ಥೆ, ಶಿಷ್ಯರೆಲ್ಲರ ಸಂಘಟನೆ, ಚಾತುರ್ಮಾಸ್ಯಗುರುದರ್ಶನ, ಶ್ರೀಮಠದಲ್ಲಿ ನಡೆಯುವ ವಿಶೇಷ ಸಮಾರಂಭಗಳು ಇತ್ಯಾದಿಗಳಲ್ಲಿ ತಾವೂ ಭಾಗವಹಿಸಿ, ತಮ್ಮ ಪ್ರಾಂತದ ಶಿಷ್ಯರನ್ನೂ ಪಾಲ್ಗೊಳ್ಳುವಂತೆ ಮಾಡುತ್ತಾರೆ. ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದ ಸೂಕ್ಷ್ಮ ವಿಚಾರಗಳ ಕುರಿತು ಸಮಸ್ಯೆಗಳು ಉದ್ಭವಿಸಿದಾಗ ಅವುಗಳನ್ನು ಪರಿಹರಿಸಿಕೊಳ್ಳಲು ಶ್ರೀಮಠದ ಶಿಷ್ಯರು ಅಥವಾ ತಮ್ಮ ಪ್ರಾಂತದ ಆಸ್ತಿಕ ಮಹಾಜನರು ತಮ್ಮನ್ನು ಸಂಪರ್ಕಿಸಿದಾಗ ಅವರಿಗೆ ಸೂಕ್ತ ಸಲಹೆ ನೀಡುತ್ತಾರೆ. ಅವಶ್ಯವಿದ್ದಲ್ಲಿ ಜಗದ್ಗುರು ಗಳವರ ಸನ್ನಿಧಿಗೆ ಅವರನ್ನು ಕರೆತಂದು ಸೂಕ್ತ ಮಾರ್ಗದರ್ಶನ ದೊರೆಯುವಂತೆ ಮಾಡುತ್ತಾರೆ. ಶುಭ ಸಮಾರಂಭಗಳಲ್ಲಿ ಸಂಪ್ರದಾಯದಂತೆ ಜಗದ್ಗುರು ಪೀಠಕ್ಕೆ ಸಲ್ಲಬೇಕಾದ ಗುರುಕಾಣಿಕೆ, ಭಿಕ್ಷಾಕಾಣಿಕೆ-ಇತ್ಯಾದಿಗಳನ್ನು ಪಡೆದು, ಅಧಿಕೃತ ರಶೀದಿ ನೀಡಿ, ಅವನ್ನು ಶ್ರೀಮಠಕ್ಕೆ ತಲುಪಿಸುವು ದಲ್ಲದೇ ಜಗದ್ಗುರುಗಳವರು ಅನುಗ್ರಹಿಸುವ ಮಂತ್ರಾಕ್ಷತೆ ಮತ್ತು ಶ್ರೀಶಾರದಾಂಬೆಯ ಪ್ರಸಾದವನ್ನು ಸಂಬಂಧಪಟ್ಟವರಿಗೆ ತಲುಪಿಸುವ ಕಾರ್ಯವನ್ನೂ ಇವರು ನಿರ್ವಹಿಸುತ್ತಾರೆ. ಜಗದ್ಗುರುಗಳವರ ಸಮ್ಮುಖದಲ್ಲಿ ಆಗಾಗೆ ಧರ್ಮಾಧಿಕಾರಿಗಳ ಸಭೆಯನ್ನು ಏರ್ಪಡಿಸಿ, ಅವರಿಗೆ ಸೂಕ್ತ ಮಾರ್ಗದರ್ಶನ ನೀಡುವ ಕಾರ್ಯವನ್ನು ಶ್ರೀಮಠದ ಆಡಳಿತಾಧಿಕಾರಿಗಳು ಸಮರ್ಪಕವಾಗಿ ನಡೆಸುತ್ತಿದ್ದಾರೆ.



**ಶೈಕ್ಷಣಿಕ ಚಟುವಟಿಕೆಗಳು :** ಅಧ್ಯಯನ ಮತ್ತು ಅಧ್ಯಾಪನಗಳಿಗೆ ಶ್ರೀಶಾರದಾ ಪೀಠದಲ್ಲಿ ಮೊದಲಿನಿಂದಲೂ ಆದ್ಯತೆ ನೀಡಲಾಗುತ್ತಿದೆ. ತಮ್ಮ ಪರಮೇಷ್ಠಿ ಗುರುಗಳು ಸ್ಥಾಪಿಸಿ, ಮುನ್ನಡೆಸಿದ ಶೃಂಗೇರಿ ಯ ಸದ್ವಿದ್ಯಾ ಸಂಜೀವಿನೀ ಪಾಠಶಾಲೆಯ ಶತಮಾನೋತ್ಸವವನ್ನು 1995ರಲ್ಲಿ ಅರ್ಥಪೂರ್ಣವಾಗಿ ಆಚರಿಸಿದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರು ಆ ಸಂದರ್ಭದಲ್ಲಿ ಪ್ರಾಚೀನ ಗುರುಕುಲ ಮಾದರಿಯ 'ಶತಮಾನೋತ್ಸವ ಭವನ'ವನ್ನು ನಿರ್ಮಾಣ ಮಾಡಿಸಿದರು. ಈ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ವೇದ- ಶಾಸ್ತ್ರಗಳನ್ನು ಅಧ್ಯಯನ ಮಾಡಲು ಬೇಕಾದ ಎಲ್ಲ ಸವಲತ್ತುಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಬೆಂಗಳೂರು, ಕಾಲಟಿ, ಹೈದ್ರಾಬಾದ್, ತಿರುನಲ್ವೇಲಿ, ಕೊಯಮತ್ತೂರು, ಚೆನ್ನೈ, ಸಿದ್ಧಾಪುರ ಮೊದಲಾದ ಅನೇಕ ಶಾಖಾ ಮಠಗಳಲ್ಲಿ ಮತ್ತು ದೇಶದ ನಾನಾ ಭಾಗಗಳಲ್ಲಿ ವೇದ-ಸಂಸ್ಕೃತ ಪಾಠ ಶಾಲೆಗಳು ವ್ಯವಸ್ಥಿತವಾಗಿ ನಡೆಯುತ್ತಿವೆ. ಈ ಪಾಠ ಶಾಲೆಗಳಲ್ಲಿ ಅಧ್ಯಯನ ಮಾಡಿದ ಅನೇಕ ವಿದ್ಯಾರ್ಥಿಗಳು ಇಂದು ದೇಶ-ವಿದೇಶಗಳಲ್ಲಿ ಧಾರ್ಮಿಕ ನೇತಾರರಾಗಿ, ಅರ್ಚಕರಾಗಿ, ಪುರೋಹಿತರಾಗಿ, ಶಿಕ್ಷಕರಾಗಿ ಶ್ರೀಮಠದ ಕೀರ್ತಿಯನ್ನು ಎಲ್ಲೆಡೆ ಪಸರಿಸುತ್ತಿದ್ದಾರೆ.

ಸುಮಾರು ನೂರ ಇಪ್ಪತ್ತೈದು ವರ್ಷಗಳಿಂದ ನಡೆದುಕೊಂಡು ಬರುತ್ತಿರುವ 'ಮಹಾಗಣಪತಿ ವಾಕ್ಯಾರ್ಥ ವಿದ್ವತ್ಸಭೆ' ವೇದ- ಶಾಸ್ತ್ರಗಳ ಸಂರಕ್ಷಣೆಗೆ ಮೀಸಲಾದ ಒಂದು ಅಪೂರ್ವ ಸಂಸ್ಥೆ. ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರು ಆರಂಭಿಸಿದ 'ಶಾಸ್ತ್ರಸಂವರ್ಧಿನೀ ಸಭಾ' ಮತ್ತು 'ಶಾಸ್ತ್ರಪೋಷಕ ಸಭಾ'ಗಳು ಈ ಸಂಸ್ಥೆಗೆ ಹೊಸ ಆಯಾಮ ನೀಡಿ, ಅನೇಕ ಮಂದಿ ವಿದ್ವಾಂಸರನ್ನು ಪ್ರೋತ್ಸಾಹಿಸಿ, ಈ ಮಹಾಗಣಪತಿ ವಾಕ್ಯಾರ್ಥ ವಿದ್ವತ್ಸಭೆಯಲ್ಲಿ ಅವರು ಸಕ್ರಿಯವಾಗಿ ಭಾಗವಹಿಸುವಂತೆ ಮಾಡುತ್ತಿವೆ. ಅರ್ಹರಾದ ವೇದ-ಶಾಸ್ತ್ರ ಪಂಡಿತರಿಗೆ ಜೀವನ ಪರ್ಯಂತ ಪ್ರತಿ ತಿಂಗಳೂ ಅವರಿದ್ದಲ್ಲಿಗೇ ಗಮನಾರ್ಹ ಮೊತ್ತದ ಸಂಭಾವನೆ ಕಳುಹುವ ವ್ಯವಸ್ಥೆ ಮಾಡಲಾಗಿದೆ. 'ವೇದಪೋಷಕ ಸಭಾ'ದ ಆಶ್ರಯದಲ್ಲಿ ವೇದ ವಿದ್ವಾಂಸರಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ. ಶ್ರೀ ಶ್ರೀ ಗಳವರ ಐವತ್ತನೇ ವರ್ಧಂತ್ಯುತ್ಸವದಿಂದ ಮೊದಲ್ಗೊಂಡು ಪ್ರತಿವರ್ಷವೂ ಶ್ರೇಷ್ಠ ವಿದ್ವಾಂಸರೊಬ್ಬರಿಗೆ ಅಥವಾ ವೇದಶಾಸ್ತ್ರಗಳ ಪ್ರಚಾರವನ್ನು ಮಾಡುತ್ತಿರುವ ಸಂಸ್ಥೆಗೆ ಒಂದು ಲಕ್ಷ ರೂಪಾಯಿ ಮೊತ್ತದ 'ಶಾರದಾಪೀಠ ಪುರಸ್ಕಾರ'ವನ್ನು ನೀಡಲಾಗುತ್ತಿದೆ. ಪ್ರತಿವರ್ಷ ಶ್ರೀಶಂಕರ ಜಯಂತಿಯ ಸಂದರ್ಭದಲ್ಲಿ ನಡೆಯುವ ವೇದ ಸಮ್ಮೇಳನಗಳು ಮತ್ತು 1994ರಲ್ಲಿ ಜಗದ್ಗುರುಗಳವರ ವರ್ಧಂತ್ಯುತ್ಸವದ ಸಂದರ್ಭದಲ್ಲಿ ನಡೆದ ಮೂರು ದಿನಗಳ ಅಖಿಲ ಭಾರತ ವೇದ ಸಮ್ಮೇಳನ ಸ್ಮರಣಾರ್ಹವಾಗಿದೆ. ಇತ್ತೀಚಿನ ವರ್ಷ ಗಳಲ್ಲಿ ದೇಶಾದ್ಯಂತ ಅನೇಕ ಪ್ರದೇಶಗಳಲ್ಲಿ ವಿದ್ವತ್ಸಭೆಗಳನ್ನು ಏರ್ಪಡಿಸ ಲಾಗುತ್ತಿದೆ. ಶ್ರೀಮಠದ 'ಸುರಸರಸ್ವತೀ ಸಭಾ' ಜನಸಾಮಾನ್ಯರಿಗೆ ಸಂಸ್ಕೃತ ಕಲಿಸುವ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡು ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.

ಪ್ರಾಚೀನ ಪರಂಪರೆಯ ಬುನಾದಿಯ ಮೇಲೆ ಆಧುನಿಕತೆ ಸ್ಥಾಪಿತವಾಗಬೇಕು. ಈ ಆಧುನಿಕ ಶಿಕ್ಷಣ ಮೌಲ್ಯಾಧಾರಿತವಾಗಿರಬೇಕು ಎಂಬುದು ಜಗದ್ಗುರುಗಳವರ ಆಶಯ. ಈ ಹಿನ್ನೆಲೆಯಲ್ಲಿ ಶೃಂಗೇರಿ ಶ್ರೀಶಾರದಾ ಪೀಠ ಅನೇಕ ಆಧುನಿಕ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದೆ.

(ಮುಂದುವರಿಯುವುದು)

## ರಾಮಾ ಅಟೋಮೊಬೈಲ್ಸ್

ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
**ಫೋನ್ : 2454355, ಮೊಬೈಲ್ : 94485 45702**
ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ




## ದೇವಿಕೃಪಾ ಏಜೆನ್ಸೀಸ್, ನಂದಿಕೂರು



**ಫೋನ್ :** 2556536 (R), 2555466 (O)

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

# ಯುರೋಪ್ ಪ್ರವಾಸ ಕಥನ

**ಮಹಾಲಕ್ಷ್ಮೀ ಶಾನುಭಾಗ್, ಅಂಬಲಪಾಡಿ**



ಆಲ್ಫ್ಸ್ ಪರ್ವತ ಶ್ರೇಣಿ, ಸ್ವಿಜರ್ಲೆಂಡ್

(ಹಿಂದಿನ ಸಂಚಿಕೆಯಿಂದ)

**''ಸ್ವಿಟ್ಜರ್‌ಲ್ಯಾಂಡ್-ಬುವಿಗಿಳಿದ ಸ್ವರ್ಗದ ತುಣುಕು''** : ಲಂಡನ್, ನೆದರ್‌ಲ್ಯಾಂಡ್, ಬೆಲ್ಜಿಯಂ ಹಾಗೂ ಜರ್ಮನಿ ದೇಶಗಳನ್ನು ಸಂದರ್ಶಿಸಿದ ಬಳಿಗೆ 24-7-2011ರಂದು ಸ್ವಿಟ್ಜರ್ಲೆಂಡಿಗೆ ಪ್ರಯಾಣ ಬೆಳೆಸಿದೆವು. ಇಡೀ ಸ್ವಿಸ್ ಪ್ರಯಾಣದಲ್ಲಿ ಮನಸ್ಸನ್ನು ಸೆಳೆಯುವುದು ಹಸಿರುಟ್ಟ ನಿಸರ್ಗ. ಸ್ವಿಸ್‌ನಲ್ಲಿ ವರ್ಷದ ಮುಕ್ಕಾಲು ಪಾಲು ಚಳಿಯಿಂದ ನಡುಗುತ್ತಲೇ ಇರಬೇಕಾದ ಪರಿಸ್ಥಿತಿ. ಹಿಮ-ಹಿಮ-ಹಿಮ. ಎತ್ತ ನೋಡಿದರೂ ಹತಿಯನ್ನು ಹಿಂಜಿ ಬಿಟ್ಟಂತೆ ಸುರಿಯುತ್ತಲೇ ಇರುವ ಹಿಮದ ರಾಶಿ. ಸದಾ ಹಿಮಾಚ್ಛಾದಿತ ಆಲ್ಫ್ಸ್ ಪರ್ವತಶ್ರೇಣಿ ಇಡೀ ಸ್ವಿಟ್ಜರ್ಲೆಂಡನ್ನು ಶೈತ್ಯವಾಗಿ



ಸ್ವಿಸ್‌ನ ಹೂವಿನ ಗಡಿಯಾರ

ಡುತ್ತದೆ. ಸ್ವಿಸ್‌ನಲ್ಲಿ ಬ್ಯಾಂಕಿಂಗ್‌ಗೇ ಮೊದಲ ಸ್ಥಾನ. ಶ್ರೀಮಂತರು ಸ್ವಿಸ್ ಬ್ಯಾಂಕ್‌ನಲ್ಲಿ ಗುಪ್ತವಾಗಿ ಹಣ ಇಡುವ ಬಗ್ಗೆ ಕೇಳಿದ್ದೇವೆ. ಇನ್ಸುರೆನ್ಸ್, ಮೆಷಿನರಿ ಕ್ಷೇತ್ರಗಳು ಬ್ಯಾಂಕಿಂಗನ್ನು ಅನುಸರಿಸುತ್ತದೆ. ಪ್ರವಾಸೋದ್ಯಮ ವರ್ಷ ವರ್ಷವೂ ವೃದ್ಧಿ ಹೊಂದತಲೇ ಇದೆ. ಜರ್ಮನಿಯಿಂದ ಬಂದ ಜನರೇ ವಲಸಿಗರಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಇನ್ನಿತರ ದೇಶಗಳಿಂದ ಬಂದ ವಲಸಿಗರೂ ಇದ್ದಾರೆ. ಜರ್ಮನ್ ಅಧಿಕೃತ ಭಾಷೆ. ಮಾತಾಡಲಿಕ್ಕೆ ಸ್ವಿಸ್ ಜರ್ಮನ್ ಭಾಷೆ ಬಳಕೆಯಲ್ಲಿದೆ. ಇಂಗ್ಲಿಷ್ ತಿಳಿದವರು ಅಷ್ಟಕಷ್ಟೆ.

ಮೊದಲಿಗೆ ನಾವು ಸ್ವಿಸ್‌ನ Financial Capital 'ಜ್ಯುರಿಚ್' ತಲುಪಿದೆವು. ಜ್ಯುರಿಚ್ ಸ್ವಿಸ್‌ನ ಅತೀ ದೊಡ್ಡ ನಗರ. ಎಲ್ಲಾ ಮಹಾನಗರಗಳಂತೆ ಇಲ್ಲೂ ಅತ್ಯಾಧುನಿಕ ಟ್ರಾಮ್ ಸೌಕರ್ಯವಿದೆ. ಗಡಿಯಾರಗಳ ದೇಶವಾದುದರಿಂದ ಇಲ್ಲಿ ಸಮಯ ಪಾಲನೆಗೆ ತುಂಬಾ ಮಹತ್ವ ಕೊಡುತ್ತಾರೆ. ರಸ್ತೆಯ ಮಧ್ಯದಲ್ಲೇ ಟ್ರಾಮ್ ಸಂಚರಿಸುತ್ತದೆ. ಶಾಪಿಂಗ್ ಮಾಲ್‌ಗಳು ಕೂಡಾ ರಸ್ತೆಯ ಪ್ರಾರಂಭದಿಂದ ಅಂತ್ಯದವರೆಗೂ ವ್ಯಾಪಿಸಿವೆ. ಅವುಗಳಲ್ಲಿ ಮುಖ್ಯವಾಗಿ ಗಡಿಯಾರಗಳ ಅಂಗಡಿ, ಆಭರಣಗಳು, ಬಟ್ಟೆ ಅಂಗಡಿಗಳದ್ದೇ ಕಾರುಬಾರು. ಜ್ಯುರಿಚ್‌ನ ಪ್ರಸಿದ್ಧ 'ಜ್ಯುರಿಚ್‌ಲೇಕ್' ನೋಡಿದೆವು. 13ನೆಯ ಶತಮಾನದಿಂದ 20ನೆಯ ಶತಮಾನದ ವರೆಗೂ ಹೆಚ್ಚು ಕಡಿಮೆ 25 ಬಾರಿ ಲೇಕ್ ಹೆಪ್ಪುಗಟ್ಟಿದೆಯಂತೆ. ಜ್ಯುರಿಚ್‌ನಲ್ಲಿ ಮೂರು ಪ್ರಮುಖ ಚರ್ಚುಗಳಿವೆ. ದೊಡ್ಡ ದೊಡ್ಡ ಗೋತಿಕ್ ಶೈಲಿಯ ಕಟ್ಟಡಗಳು ಅತಿ ದೊಡ್ಡ ಗಡಿಯಾರಗಳನ್ನು ಹೊಂದಿವೆ. ಇವರೆಂಥಾ ಗಡಿಯಾರ ಪ್ರಿಯರೆಂದರೆ ನೆಲದ ಮೇಲೂ, ಪಾರ್ಕ್‌ಗಳಲ್ಲಿಯೂ ಅತಿ ಸುಂದರ ಹೂ ಗಡಿಯಾರಗಳನ್ನು ಸೃಷ್ಟಿಸಿದ್ದಾರೆ. 'ಲೈಫ್ ಟೈಂ' ಗ್ಯಾರಂಟಿ ಹಾಗೂ ಒರಿಜಿನಲ್ ಸ್ವಿಸ್ ಗಡಿಯಾರಗಳ ಶೋ ರೂಂಗಳು ನಮ್ಮನ್ನು ಆಕರ್ಷಿಸುತ್ತವೆ. ಆದರೆ ತುಂಬಾ... ದುಬಾರಿ.

ಜ್ಯುರಿಚ್ ವೀಕ್ಷಣೆಯ ಬಳಿಕ ಮಧ್ಯ ಸ್ವಿಟ್ಜರ್ಲೆಂಡ್‌ನ ಮನಮೋಹಕ ನಿಸರ್ಗ ತಾಣ 'Lucerne' (ಲೂಸೆರ್ನ್)ಗೆ ಹೊರಟೆವು. ಬಸ್ ಪ್ರಯಾಣದ ಉದ್ದಕ್ಕೂ ರಾಶಿ ರಾಶಿಯಾಗಿ ಹಿಮ ಬೀಳುವ ದೃಶ್ಯ ಕಾಣಸಿಗುತ್ತಿತ್ತು. ಮೌಂಟ್ ರಿಗಿ ಮತ್ತು ಮೌಂಟ್ ಪಿಲಾಟಸ್‌ಗಳ ನಡುವೆ ಹರಿಯುವ ಲೇಕ್ ಲೂಸೆರ್ನ್, ಆಸುಪಾಸಿನಲ್ಲಿರುವ ಸುಂದರ ಮನೆಗಳು, ಹಾವಿನಂತೆ ಹರಿದು ಹೋಗಿರುವ ರಸ್ತೆ, ಬೆಟ್ಟವನ್ನು ಮುಚ್ಚಿರುವ ಹಿಮದ ರಾಶಿ ಲೂಸೆರ್ನ್‌ನ್ನು ಸುಂದರವಾಗಿರಿಸಿದೆ. 14ನೆಯ ಶತಮಾನದಲ್ಲಿ ನಿರ್ಮಿಸಿದ ಅತ್ಯಂತ ಹಳೆಯ ಸೇತುವೆ ಹಾಗೂ 'ಲಯನ್ ಮ್ಯಾನುಮೆಂಟ್ (Lion Monument) ಈ ನಗರದ ಪ್ರಮುಖ ಆಕರ್ಷಣೆಯಾಗಿದೆ. ವಿಶಾಲವಾದ ಜಾಗದಲ್ಲಿ ಪುಟ್ಟ ಗುಡ್ಡದಂಥ ಬಂಡೆಯ ಮೇಲೆ ರೋದಿಸುತಾ ಅಥವಾ ದುಃಖತಪ್ತವಾಗಿ ಸಿಂಹವು ಮಲಗಿರುವ ಚಿತ್ರವನ್ನು ಕೆತ್ತಲಾಗಿದೆ. ಇಂಥಾ ಪ್ರಸಿದ್ಧ ತಾಣದ ನಿರ್ಮಾಣದ ಹಿಂದಿನ ಕಥೆಯೂ ಸ್ವಾರಸ್ಯ ಕರ. ಆದರೆ ನಮಗೆ ನಂಬಲಸಾಧ್ಯ. ನಿಷ್ಠೆಯಿಂದ ಹೋರಾಡಿ ಪ್ರಾಣ ತೆತ್ತ ಸ್ವಿಸ್ ಸೈನಿಕರ ನೆನಪಿಗಾಗಿ ನಿರ್ಮಾಣವಾಗಿದೆಯಂತೆ ಈ ಲಯನ್ ಮಾನ್ಯುಮೆಂಟ್!

ಮರುದಿನ ಬೆಳಿಗ್ಗೆ 7 ಗಂಟೆಗೇ ಫಲಾಹಾರ ಮುಗಿಸಿಕೊಂಡು ಅಲ್ಲಿಯ ಸುಂದರವಾದ ಹೂ ತೋಟಗಳನ್ನು, ಸರೋವರಗಳನ್ನು ಹಾಗೂ ದೊಡ್ಡ ದೊಡ್ಡ ಸುಂದರ ಕಟ್ಟಡಗಳನ್ನು ನೋಡಿದೆವು. ಮುಂದೆ ಹಿಮಾಚ್ಛಾದಿತ ಬೆಟ್ಟವನ್ನು ಹತ್ತಿ ಸ್ವಿಸ್‌ನ ಸುಪ್ರಸಿದ್ಧ ''Trummelbach Falls'' ನೋಡಲು ಹೋದೆವು. ಈ ಜಲಪಾತವು ಪರ್ವತಗಳ ಒಳಗಿನಿಂದಲೇ ಹರಿದು ನೀರು ಕೆಳಗೆ ಬೀಳುವ ದೃಶ್ಯ ಮೇಲೆ ಹೋದಾಗ ಕಾಣುತ್ತದೆ. ಅರ್ಧ ಪರ್ವತದವರೆಗೆ ಹೋಗಲು ಲಿಫ್ಟ್‌ನ ವ್ಯವಸ್ಥೆ ಇದ್ದು ಜಲಪಾತದ ಅಂಚಿನಲ್ಲಿ ಹೋಗಿ ವೀಕ್ಷಿಸಲು ಕಾಲುದಾರಿಯ ವ್ಯವಸ್ಥೆ ಇದೆ. ಇಲ್ಲಿ ನೀರು ಅತಿ ಎತ್ತರದಿಂದ ರಭಸವಾಗಿ ಬೀಳುವುದರಿಂದ ವಾತಾವರಣವು ತುಂಬ ಶಬ್ದಮಯ ವಾಗಿದ್ದು ಹಿಮದಿಂದಾಗಿ ಶೀತಗಾಳಿಯು ಬೀಸುತ್ತಿರುತ್ತದೆ. ವಿಪರೀತ ಚಳಿಯಾಗುತ್ತಿರುತ್ತದೆ. ಈ ಅದ್ಭುತವನ್ನು ನೋಡಲು ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಾರೆ.

ಅಲ್ಲಿಂದ ಯುರೋಪಿನ ಅತಿ ಎತ್ತರವಾದ ಪ್ರದೇಶ ''Jungfranjoch'' ನೋಡಲು ಹೊರಟೆವು. ಇದು ಆಲ್ಫ್ಸ್ ಪರ್ವತ ಶ್ರೇಣಿಯ ತುತ್ತ ತುದಿಯಲ್ಲಿದ್ದು 3454 ಮೀಟರ್ ಎತ್ತರದಲ್ಲಿದೆ. ಇಲ್ಲಿಗೆ ಹೋಗಲು Cog-Wheel Trainನ ವ್ಯವಸ್ಥೆ ಇದ್ದು ಮೇಲೆ ಹತ್ತಲು ಪ್ರತ್ಯೇಕ ಮತ್ತು ಕೆಳಗೆ ಇಳಿಯಲು ಪ್ರತ್ಯೇಕ ಲೈನುಗಳಿವೆ. ಇದರಲ್ಲಿ 3 ಅಥವಾ 4 ಸುಸಜ್ಜಿತ ಕಂಪಾರ್ಟ್‌ಮೆಂಟ್‌ಗಳಿದ್ದು ರೈಲು ನಿಧಾನವಾಗಿ ಮೇಲೆ ಹಾಗೂ ಕೆಳಗೆ ಚಲಿಸುತ್ತದೆ. ಈ ರೈಲಿಗೆ ಹಲ್ಲಿರುವ ಚಕ್ರಗಳಿವೆ.

ಈ ವ್ಯವಸ್ಥೆಯನ್ನು ಸ್ವಿಸ್‌ನಲ್ಲಿ ಬಹಳ ಹಿಂದೆಯೇ ಪ್ರಾರಂಭಿಸಲಾಗಿದ್ದು ಇಂದಿಗೂ ನಿರಾಂತಂಕವಾಗಿ ಇದು ನಡೆಯುತ್ತಿರುವುದು ಅವರ ತಾಂತ್ರಿಕತೆಯ ನೈಪುಣ್ಯಕ್ಕೆ ಸಾಕ್ಷಿಯಾಗಿದೆ. ಇಂತಹ cog wheel trainನ ವ್ಯವಸ್ಥೆ ಪ್ರಪಂಚದ ಯಾವ ಬೆಟ್ಟ ಪ್ರದೇಶದಲ್ಲಿಯೂ ಇರಲಾರದು. ಪರ್ವತದ ತುತ್ತ ತುದಿಯಲ್ಲಿ ಕೂಡಾ ಅವರು ಪ್ರವಾಸಿಗರ ಅನುಕೂಲಕ್ಕಾಗಿ ಹೋಟೇಲುಗಳು, Ice Palace, Sphinx Terrace ಹೂ ತೋಟಗಳನ್ನು ತುಂಬಾ ಅಚ್ಚುಕಟ್ಟಾಗಿ ನಿರ್ಮಿಸಿದ್ದಾರೆ. ಇಲ್ಲಿಂದ ಕಾಣುವ ಹಿಮಾಚ್ಛಾದಿತ ಆಲ್ಫ್ಸ್ ಪರ್ವತ ಶ್ರೇಣಿ ಹಾಗೂ ತಪ್ಪಲಿನ ಪ್ರದೇಶದ ದೃಶ್ಯ ನೋಡಲು ಅತಿ ಸುಂದರ, ವರ್ಣಿಸಲು ಅಸಾಧ್ಯ. ಇಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಜಗತ್ತಿನ ಬೇರೆ ಬೇರೆ ದೇಶಗಳಿಂದ ಬಂದ ಪ್ರವಾಸಿಗರು ಇದ್ದರೂ ಕಟ್ಟುನಿಟ್ಟಿನ ವ್ಯವಸ್ಥೆಯಿಂದಾಗಿ ನಿರಾಯಾಸವಾಗಿ ಉತ್ತರ ಭಾರತೀಯ ಶೈಲಿಯ ಊಟ ಅಲ್ಲಿಯೇ ಮಾಡಿ ಕೆಳಗಿಳಿದು ಬಂದು ಹೋಟೇಲಿಗೆ ವಿಶ್ರಾಂತಿ, ನಿದ್ರೆಗೆಂದು ತೆರಳಿದೆವು.

Lucerneನಿಂದ ಮುಕ್ಕಾಲು ಗಂಟೆ ಪ್ರಯಾಣ ಮಾಡಿದರೆ Engelberg ಎಂಬ ಹಳ್ಳಿ ಸಿಗುವುದು. ಇಲ್ಲಿಯೇ ''Mount Titlis''ನ್ನು ಹತಲು ಮೂಲಸ್ಥಳವಿರುವುದು. ಇಡೀ ಬೆಟ್ಟಕ್ಕೆ ಹಿಮದ ಚಾದರ ಹೊದೆಸಿದಂತೆ ಭಾಸವಾಗುತ್ತದೆ. 3020 ಮೀ. ಎತ್ತರವಿರುವ ಈ ಬೆಟ್ಟವನ್ನು ಹತ್ತಲು ಮೂರು ವಿಭಿನ್ನ ಕೇಬಲ್ ಕಾರ್‌ಗಳನ್ನು ಬಳಸುತ್ತಾರೆ. 'ಸ್ಕೀಯಿಂಗ್' ಮಾಡುವವರಿಗೆ ಸ್ವರ್ಗ. ಮೊದಲಿಗೆ 4ರಿಂದ 6 ಜನ ಕುಳಿತುಕೊಳ್ಳಬಹುದಾದ ಕೇಬಲ್ ಕಾರ್‌ನಲ್ಲಿ 20 ನಿಮಿಷಗಳ ಪ್ರಯಾಣ 20 ಸೆಕೆಂಡಿನಂತೆ ಕಳೆದೇ ಹೋಯಿತು. ಅನಂತರ ಮತ್ತೊಂದು ಕೇಬಲ್ ಕಾರ್. ನಿಂತೇ ಪ್ರಯಾಣಿಸ ಬೇಕು. ಅದರಲ್ಲೂ ಪ್ರಯಾಣ ಮುಗಿಸಿ ಅಂತಿಮ ವಾಗಿ ನಾವು ಹತ್ತಿದ ಕೇಬಲ್ ಕಾರಿಗೆ ''Rotair'' ಅನ್ನುತ್ತಾರೆ. ಇದರ ವಿಶೇಷವೆಂದರೆ ಇದು 360 ಡಿಗ್ರಿ ಸುತ್ತುತ್ತಾ ಇಡೀ ಟಿಟ್ಲಿಸ್ ಬೆಟ್ಟದ ದರ್ಶನ ಮಾಡಿಸುತ್ತದೆ. ಈ ರೀತಿ ಸುತ್ತುವ ಕೇಬಲ್ ಕಾರ್ ವಿಶ್ವದಲ್ಲೇ ಪ್ರಥಮ ಬಾರಿಗೆ ಅಳವಡಿಸಿದವರು ಸ್ವಿಟ್ಜರ್ಲೆಂಡಿನವರು. ಸರಾಸರಿ 45 ನಿಮಿಷಗಳಲ್ಲಿ 3 ವಿಭಿನ್ನ ಕೇಬಲ್ ಕಾರ್‌ಗಳಲ್ಲಿ ಪ್ರಯಾಣಿಸಿ 3020 ಮೀಟರ್ ಮೇಲೆ ಮೌಂಟ್ ಟಿಟ್ಲಿಸ್‌ನ ಪ್ರಕೃತಿಯಲ್ಲಿ ಮೈಮರೆತಿದ್ದೆವು. ಇಲ್ಲಿ ನಾವು Snow Terrace ಹಾಗೂ Ice Grottoದಲ್ಲಿ ವಿನೂತನ ಅನುಭವ ಅನುಭವಿಸಿದೆವು. Snow



ಜಿನಿವಾ ಪಾರ್ಕಿನಲ್ಲಿರುವ ಯುದ್ಧ ಸ್ಮಾರಕ
ಮುರಿದ ಮರದ ಕುರ್ಚಿ

Terraceನಲ್ಲಿ ಸುಸ್ತಾಗುವಷ್ಟು ಮಂಜಿನ ಜತೆ ಎಲ್ಲಾ ಪ್ರವಾಸಿಗರೂ ಆಟವಾಡಿ ಫೋಟೋ ತೆಗೆಸಿ ಕೊಂಡು ಸಂತೋಷ ಪಟ್ಟೆವು. Ice Grotto ಎನ್ನುವುದು ಒಂದು ಕೃತಕ ಗುಹೆ. ಕಿರಿದಾದ ರಸ್ತೆ, ಕತ್ತಲು, ನಡೆಯುವುದು ಹಿಮದ ಮೇಲೆ. ನಮ್ಮ ಸುತ್ತ ಆವರಿಸಿರುವುದು ಗೋಡೆಯಲ್ಲ, ಅದು ಹಿಮ. ನಮ್ಮ ನೆತ್ತಿಯ ಮೇಲಿನ ಸೂರು ಕೂಡಾ ಹಿಮವೇ. 20 ಮೀಟರ್ ಅಗಲ ಹಾಗೂ 150 ಮೀಟರ್ ಉದ್ದವಿರುವ ಕೊಳವೆಯಂಥಾ ಗುಹೆಯಲ್ಲಿ ನಡೆಯುವುದೇ ರೋಮಾಂಚಕ ಅನುಭವ. ಈ ಎಲ್ಲಾ ಸಂತೋಷವನ್ನು ಅನುಭವಿಸಿ ಸವಿ ನೆನಪಿಗಾಗಿ ಫೋಟೋಗಳನ್ನು ತೆಗೆಸಿಕೊಂಡ ಬಳಿಕ ಮನಸ್ಸಿಲ್ಲದ ಮನಸ್ಸಿನಿಂದ ಎಲ್ಲರೂ ಕೆಳಗಿಳಿದು ಬಂದು ವಾಪಸ್ Engelberg ತಲುಪಿದೆವು.

ನಂತರ ನಾವು ಸ್ವಿಟ್ಜರ್ಲೆಂಡಿನ ಗಾರ್ಡ್‌ನ್ ಸಿಟಿ 'Geneva' ನೋಡಿದೆವು. ಜಿನೀವಾದ ಸಿಟಿ ಟೂರ್‌ನಲ್ಲಿ ಸುಂದರವಾದ 'ಜಿನೀವಾ ಲೇಕ್' ನೋಡಿದೆವು. ನಂತರ ಯುರೋಪಿನ UNO Head Quarters, International Red Cross Building ಹಾಗೂ 140 ಮೀಟರ್ ಎತ್ತರಕ್ಕೆ ಹಾರುವ ಅತಿ ಎತರದ ಕಾರಂಜಿಯನ್ನು ನೋಡಿದೆವು. ಜಿನೀವಾ ಲೇಕ್‌ನ ಬಳಿ ಇರುವ ಪಾರ್ಕ್, ಪಾರ್ಕ್‌ಗಳಲ್ಲಿ ಸೃಷ್ಟಿಸಿದ ಅತಿ ಸುಂದರ ಹೂ ಗಡಿಯಾರಗಳನ್ನು, ಕಾರಂಜಿಗಳನ್ನೂ ನೋಡಿ ಸಂತೋಷಪಟ್ಟೆವು.

ಇನ್ನು ಮುಂದಿನ ಪ್ರಯಾಣ ಯುರೋಪಿನ Austria *ದೇಶಕ್ಕೆ....*

AUSTRIA **(ಆಸ್ಟ್ರೀಯಾ):** ಸ್ವಿಟ್ಜರ್ಲೆಂಡ್‌ನ 3 ದಿವಸದ ಪ್ರವಾಸದ ಬಳಿಕ ಆಸ್ಟ್ರಿಯಾ ದೇಶಕ್ಕೆ ತೆರಳಿದೆವು. ಆಸ್ಟ್ರಿಯಾ ದೇಶವು ಯುರೋಪಿನ ಅತಿ ಸಣ್ಣ ರಾಷ್ಟ್ರವಾಗಿದ್ದು ಆರ್ಥಿಕವಾಗಿ ಮುಂದುವರಿದಿದೆ. ಸ್ವಿಟ್ಜರ್ಲೆಂಡನ್ನು ಆವರಿಸಿದ ಆಲ್ಫ್ಸ್ ಪರ್ವತ ಶ್ರೇಣಿಯನ್ನು ದಾಟಿ ಆಸ್ಟ್ರಿಯಾಕ್ಕೆ ಹೋಗಲು ಬಸ್ಸಿನಲ್ಲಿ 3-4 ತಾಸು ಬೇಕು. ಈ ದಾರಿಯಲ್ಲಿ ಹಲವಾರು ಟನಲ್‌ಗಳಿದ್ದು ಅವುಗಳಲ್ಲಿ 1 ಟನಲ್ 14 ಕಿ.ಮೀಟರ್ ಉದ್ದವಿದೆ. ಈ ಟನಲ್‌ನಲ್ಲಿ ಹೋಗಲು ಹಾಗೂ ಬರಲು 2 (Lane) ಲೇನ್‌ಗಳಿದ್ದು ನಿರಂತರ ವಿದ್ಯುತ್, ಆಮ್ಲಜನಕದ ಪೂರೈಕೆಗಳಿಂದ ಸುಸಜ್ಜಿತವಾಗಿದೆ. ಆಸ್ಟ್ರಿಯಾದ ''Innsbruck'' ಪಟ್ಟಣವನ್ನು ತಲುಪಿ, ಅಲ್ಲಿಯ ಸಿಟಿ ಟೂರಿನಲ್ಲಿ Golden Roof, St Anne's Column, Maria



ಸ್ವರೋಸ್ಕಿ ಕ್ರಿಸ್ಟಲ್ಯ ಮ್ಯೂಸಿಯಂ ಆಸ್ಟ್ರಿಯಾ


Theresian Strasse ಮೊದಲಾದ ಪ್ರಾಚೀನ ಸ್ಮಾರಕಗಳನ್ನು ನೋಡಿದೆವು. ಇಲ್ಲಿಯ ಅತೀ ಪುರಾತನ Squares ವಿಶಾಲವಾಗಿದ್ದು ಸುತಲೂ ಅತಿ ಎತ್ತರದ ಕಟ್ಟಡಗಳಿವೆ. ಇಲ್ಲಿ ಸ್ಮಾರಕಗಳು ಒಂದಕ್ಕಿಂತ ಇನ್ನೊಂದು ಭಿನ್ನವಾಗಿದ್ದು ತುಂಬಾ ಸುಂದರವಾಗಿವೆ. ಮರುದಿನ ಮುಂಜಾನೆ ಅಲ್ಲಿಯ ಜಗತ್ಪ್ರಸಿದ್ಧ ''Swarovski Crystal Museum'' ನೋಡಲು ಹೋದೆವು. ಇದು ಹೊರಗಿನಿಂದ ವಿಶಾಲವಾದ ಹುಲ್ಲುಗಾವಲುನಂತೆ ಇದ್ದು ದ್ವಾರದಲ್ಲಿ ಮಾನವನ ತಲೆ ಬುರುಡೆಯ ಆಕೃತಿ ಇದ್ದು 2 ಕಣ್ಣುಗಳು ಸ್ಫಟಿಕಗಳಿಂದ ಹೊಳೆಯುತ್ತಿದ್ದು, ಆಕೃತಿಯ ಬಾಯಿಯಿಂದ ಜಲಪಾತದಂತೆ ನೀರು ಹರಿಯುವ ವ್ಯವಸ್ಥೆಯನ್ನು ಮಾಡಿರುತ್ತಾರೆ. ಇದರ ಒಳಹೊಕ್ಕರೆ ವಿವಿಧ ಆಕೃತಿಯ, ನಾನಾ ನಮೂನೆಯ ಸ್ಪಟಿಕ ಮಣಿಗಳ ಮಾಯಾಲೋಕವೇ ಗೋಚರಿಸುತ್ತದೆ. ಬೇರೆ ಬೇರೆ ಬಣ್ಣಗಳ ಸ್ಪಟಿಕ ಮಣಿಗಳನ್ನು ಬೆಳಕಿನ ಸಂಯೋಜನೆಯೊಂದಿಗೆ ಮಾಡಿದ ಪ್ರಾಣಿ, ಪಕ್ಷಿಗಳ, ಮರ, ಹೂ ಬಳ್ಳಿ, ಸುಂದರ ಹುಡುಗಿಯರ ಪ್ರತಿಮೆಗಳು ನಮ್ಮನ್ನು ಮಾಯಾಲೋಕಕ್ಕೆ ಒಯ್ಯುತ್ತವೆ. ಇಲ್ಲಿ ಬೇರೆ ಬೇರೆ ಬಣ್ಣದ ಸ್ಪಟಿಕದ ಅದಿರು (ಕಲ್ಲುಗಳು) ಸಿಗುತ್ತಿದ್ದು ಅವುಗಳನ್ನು ಯಂತ್ರದ ಸಹಾಯದಿಂದ ಬೇರೆ ಬೇರೆ ಆಕೃತಿಗಳಲ್ಲಿ ತುಂಡರಿಸಿ ಆಭರಣ ತಯಾರಿಸಲು ಉಪಯೋಗಿಸುತ್ತಾರೆ. ಇಲ್ಲಿಯ ಮುಖ್ಯ ಕೈಗಾರಿಕೆಯೂ ಇದೇ ಆಗಿದೆ. ನಮ್ಮ ಸಹ ಪ್ರವಾಸಿಗರು ವಿವಿಧ ಬಣ್ಣಗಳ ಸ್ಪಟಿಕ ಮಣಿಗಳ ಆಕರ್ಷಣೆಗೆ ಒಳಗಾಗಿ ಅಧಿಕ ಸಂಖ್ಯೆಯಲ್ಲಿ ಅವುಗಳನ್ನು ಖರೀದಿ ಮಾಡಿದರು.

ಇಲ್ಲಿಂದ ಮುಂದಿನ ಪ್ರಯಾಣ ಇಟಲಿ *ದೇಶಕ್ಕೆ....* (ಮುಂದುವರಿಯುವುದು)

Krishna Rao
Ph :2520652
Mob. :9902029048
KISHAN
Studio & Video
Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

PRAMOD
AUTOMOBILES
30 Years of Service
Ph :2493633 (O)
2493633 (H.O.)
2212723 (R)
Mobile :9448260225
KARANGALPADY, MANGALORE -575 003.
: Wholesale & Retail Dealers in :
2 & 3 WHEELERS SPARES & ACCESSORIES
Prop. :Ln.K. HARSHA KUMAR

# ಕನ್ನಡ ಕವಿಕಾವ್ಯ ಪರಿಚಯ-೨ : ಕುಮಾರವ್ಯಾಸ



– ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

ಸಾಮಾನ್ಯವಾಗಿ ಪ್ರಾಚೀನ ಕವಿಗಳೆಲ್ಲರಲ್ಲೂ ಇದ್ದಂತೆ ಕುಮಾರ ವ್ಯಾಸನಲ್ಲೂ ಕೂಡಾ ತನ್ನ ಕುರಿತಾದ ಹೆಗ್ಗಳಿಕೆಯನ್ನು ಹೇಳಿಕೊಳ್ಳುವ ಅಭ್ಯಾಸ ವಿತ್ತು. ತನ್ನ ಕಾವ್ಯವು ಎಂತಹುದೆಂದು ಹೇಳಿ, ಇದು ಇತರ ಕಾವ್ಯಗಳಿಗೆ ಗುರು ಎನ್ನುತ್ತಾನೆ ಕವಿ:–

*''ಅರಸುಗಳಿಗಿದು ವೀರ, ದ್ವಿಜರಿಗೆ।*
*ಪರಮ ವೇದದ ಸಾರ, ಯೋಗೀ-।*
*ಶ್ವರರ ತತ್ವ ವಿಚಾರ, ಮಂತ್ರಿ ಜನಕ್ಕೆ ಬುದ್ಧಿಗುಣ ॥*
*ವಿರಹಿಗಳ ಶೃಂಗಾರ, ವಿದ್ಯಾ ।*
*ಪರಿಣತರಲಂಕಾರ ಕಾವ್ಯಕೆ।*
*ಗುರುವೆನಲು ರಚಿಸಿದ ಕುಮಾರ ವ್ಯಾಸ ಭಾರತವ॥''*

ಹೀಗೆ ಕವಿ ತನ್ನನ್ನು ತಾನು ಹೆಗ್ಗಳಿಕೆಯಿಂದ ಹೊಗಳಿಕೊಂಡಿದ್ದರೂ ತನ್ನ ಆರಾಧ್ಯ ದೇವನಾದ ಗದುಗಿನ ವೀರ ನಾರಾಯಣ ಸ್ವಾಮಿಯನ್ನು ಎಂದಿಗೂ ಮರೆಯುವುದಿಲ್ಲ. ಆ ದೇವರ ಎದುರಿನಲ್ಲಿ ತಾನು ಏನೂ ಅಲ್ಲ, ತಾನು ವೀರ ನಾರಾಯಣನ ಸೇವಕ, ಅವನ ಅಂಕಿತದಲ್ಲಿಯೇ ತಾನು ಕಾವ್ಯವನ್ನು ಬರೆಯುತ್ತಿದ್ದೇನೆ ಎನ್ನುತ್ತಾನೆ.

*''ವೀರ ನಾರಾಯಣನೆ ಕವಿ ಲಿಪಿ-।*
*ಕಾರ ಕುವರವ್ಯಾಸ, ಕೇಳುವ।*
*ಸೂರಿಗಳು ಸನಕಾದಿಗಳು, ಜಂಗಮ ಜನಾರ್ದನರು ॥*
*ಚಾರು ಕವಿತೆಯ ಬಳಕೆಯಲ್ಲ ವಿ-।*
*ಚಾರಿಸುವಡಳವಲ್ಲ ಚಿತ್ತವ-।*
*ಧಾರು ಹೊ ಸರ್ವಜ್ಞರಾದರು ಸಲುಗೆ ಬಿನ್ನಪವ ॥''*

ಕವಿಯು ತನ್ನ ಆರಾಧ್ಯದೇವನಾದ ಗದುಗಿನ ವೀರನಾರಾಯಣನೇ ಈ ಕಾವ್ಯದ ಕಮಿಯು; ಅವನು ಹೇಳಿದುದನ್ನು ಕೇವಲ ಬರೆಯುವ ಲಿಪಿಕಾರ ತಾನು ಎಂದು ಹೇಳುತ್ತಾ ದೇವರನ್ನು ಭಕ್ತಿಯಿಂದ ನೆನೆಯುತ್ತಾನೆ. ಆದ್ದರಿಂದಲೇ ತಾನು ಬರೆದಿರುವ ಈ ಕಾವ್ಯವನ್ನು ಕೇಳುವವರು ಸನಕಾದಿಗಳು, ಜಂಗಮರು, ನಾರದಾದಿಗಳು ಹೀಗೆಲ್ಲ ಇದರ ಮಹತ್ವಿಕೆಯನ್ನು ಹೇಳಲು ಮರೆಯುವುದಿಲ್ಲ. ಇದರೊಂದಿಗೆ ತನ್ನ ಆರಾಧ್ಯ ದೇವನೇ ಕವಿಯಾಗಿರುವುದರಿಂದ ತಾನು ಬರೆಯುತ್ತಿರುವ ಕಾವ್ಯವು 'ಏಕ ಲಿಪಿಕ'ವಾಗಿ ಹೊರ ಹೊಮ್ಮುತ್ತಿದೆ ಎಂದಿರುವನು. ಒಂದು ಶಬ್ದವನ್ನು ಯಾ ಅಕ್ಷರವನ್ನು ಬರೆದು ಅದು ಸರಿಯಾಗಿಲ್ಲ ವೆಂದು ತಿದ್ದಿ ಬರೆವವನು ನಾನಲ್ಲ ಎಂದುಕೊಂಡಿದ್ದಾನೆ. 'ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ; ಪದವಿಟ್ಟಳು ಪದೊಂದಗ್ಗಳಿಕೆ; ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ' ಎಂದಿರುವನು. ಬೇರೆಯವರ ಶೈಲಿಯನ್ನಾಗಲೀ, ಅಲಂಕಾರಾದಿಗಳನ್ನಾಗಲೀ ತಾನು ಅನುಸರಿಸುವುದಿಲ್ಲ ಎಂದುಕೊಂಡಿದ್ದಾನೆ. ಹಾಗೆಯೇ ಮುಂದುವರಿದು ತಾನು ಕಾವ್ಯವನ್ನು ಬರೆಯಲು ಮಹಾಭಾರತವನ್ನು ಆಯ್ದುಕೊಂಡುದೇಕೆ ಎಂಬುದಕ್ಕೆ ಸಮರ್ಪಕವಾದ ಕಾರಣವನ್ನು ಹೇಳುತ್ತಾನೆ – 'ರಾಮಾಯಣದ ಕವಿಗಳ ಭಾರದಿಂದಾಗಿ ಭೂಮಿಯನ್ನು ಹೊತ್ತುಕೊಂಡಿರುವ ಆದಿಶೇಷನು ಕುಸಿದನು' (ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ, ತಿಂಥಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ) ಎಂದು ಹೇಳಿದ ಕುಮಾರ ವ್ಯಾಸನು ಈ ಕಾರಣಕ್ಕಾಗಿಯೇ ತಾನು ಮಹಾಭಾರತವನ್ನು ಆಯ್ದುಕೊಂಡಿರುವೆನು ಎಂದು ಹೇಳುತ್ತಾನೆ. ಕುಮಾರವ್ಯಾಸನು ಮಹಾಭಾರತದ ಕತೆಯನ್ನು ಹೇಳುವುದಾದರೂ ಇದರಲ್ಲಿ ಶ್ರೀಕೃಷ್ಣನ ಪಾರಮ್ಯವನ್ನು ಮೆರೆದಿದ್ದಾನೆ. ತನ್ನ ಆರಾಧ್ಯದೇವರಾದ ಗದುಗಿನ ವೀರನಾರಾಯಣ ಸ್ವಾಮಿಯೇ ಭಾರತದ ಶ್ರೀಕೃಷ್ಣನೆಂದು ಅಭೇದವಾಗಿ ವರ್ಣಿಸಿ, ಹೊಗಳಿ ತನ್ನ ಕೃತಿಯನ್ನು ರಚಿಸಿರುವನು.

'ಪಾಂಡವರ ಸಂದೇಶವನ್ನು ಹೊತ್ತು ಸಂಧಾನಕ್ಕಾಗಿ ಶ್ರೀಕೃಷ್ಣನು ಹಸ್ತಿನಾವತಿಯ ಕೌರವನ ಅರಮನೆಗೆ ಬಂದನು' ಎಂಬಲ್ಲಿ 'ದೇವ ಬಂದನು ದೈತ್ಯ ಕುಲವನ ದಾವ ಬಂದನು.... ವೀರ ನರಯಣ ಬಂದನರಮನೆಗೆ' ಗದುಗಿನ ವೀರ ನಾರಾಯಣನೇ ಕೌರವನ ಅರಮನೆಗೆ ಬಂದನು ಎನ್ನುತ್ತಾನೆ. ಕೆಲವು ಕಡೆಗಳಲ್ಲಿ ಶ್ರೀಕೃಷ್ಣನ ಮಹಿಮೆಯನ್ನು ಹೊಗಳಲು ಹೊರಟಿರುವ ಕವಿ ಪುಟಗಟ್ಟಲೆ ಶ್ರೀಕೃಷ್ಣನನ್ನು ಹಾಡಿ ಹೊಗಳಿದ್ದಾನೆ. ಕೃಷ್ಣನ ಮಹಿಮೆಯನ್ನು ಈತನು ಇಷ್ಟೊಂದು ಹೊಗಳಿದ್ದನ್ನು ಕಂಡು, ಇದರಿಂದ ಪ್ರೇರೇಪಣೆಗೊಂಡೋ ಏನೋ ಕವಿ ಲಕ್ಷ್ಮೀಶನು ತನ್ನ ಕೃತಿಯು 'ಪುಣ್ಯಮಿದು ಕೃಷ್ಣ ಚರಿತಾಮೃತಂ' ಎಂದಿರುವನು.

ಕೇವಲ ಕೃಷ್ಣನ ಮಹಿಮೆಯನ್ನು ಮಾತ್ರವೇ ಅಲ್ಲ, ಯಾವುದೇ ಪಾತ್ರಗಳ ಸೃಷ್ಟಿಯಲ್ಲಿಯೂ ಕವಿ ಹಿಂದುಳಿದಿಲ್ಲ. ನವರಸ ಭರಿತವಾದಂತಹ ಕಾವ್ಯವನ್ನೇ ಈತನು ರಚಿಸಿರುವನೆಂಬುದರಲ್ಲಿ ಸಂಶಯವಿಲ್ಲ. ಅಭಿಮನ್ಯುವಿನ ಪೌರುಷದ ನುಡಿಗಳನ್ನು ಕೇಳಿದಾಗ ಈತನು 'ಕುರುಕ್ಷೇತ್ರದ ಸಿಡಿಲಿನ ಕಿಡಿ' ಎಂಬ ಭಾವನೆ ಓದುಗರಲ್ಲಿ ಮೂಡುತ್ತದೆ.

*''ಬವರವಾದರೆ ಹರನ ವದನಕೆ।*
*ಬೆವರ ತಹೆನವಗಡಿಸಿದರೆ ವಾ-।*
*ಸವನ ಸದೆವೆನು ಕುಸುರಿದರಿವೆನು ಕೌರವವ್ರಜನ॥''*

ಹೀಗೆನ್ನುತ್ತಾ ಅಭಿಮನ್ಯುವು ತನ್ನ ಸಾರಥಿಯನ್ನು ಕುರಿತು ಚಕ್ರವ್ಯೂಹದ ಕಡೆಗೆ ರಥವನ್ನು ಹರಿಯಿಸು ಎನ್ನುತ್ತಾನೆ. ಹಾಗೆಯೇ ಆತನ ಚಕ್ರವ್ಯೂಹ ಪ್ರವೇಶವನ್ನು ಕವಿಯು ವರ್ಣಿಸುವ ಬಗೆ–

*''ಕದಳಿಯೊಳು ಮದದಾನೆ ಹೊಕ್ಕಂದದಲಿ ಹೆಚ್ಚಿದ ಚಾತು ರಂಗದ। ಮೆದೆಯ ಮೆಟ್ಟುತೆ ಹೂಣೆ ಹೊಕ್ಕನು ಥಟ್ಟನೊಡೆ ಹಾಯ್ದು॥ ಇದಿರಲೆಚ್ಚನು ಸಮ್ಮುಖದಲಿಹ ಕದನ ಕಲಿಗಳ ಸೀಳಿದನು. ತಾ।ಕದನ ಕಾಲನ ಲೀಲೆಯಾದುದು ವಿಷಮ ಸಮರಂಗ''*

ಹೀಗೆ ಮದ್ದಾನೆಯು ಬಾಳೆಯ ತೋಟವನ್ನು ಪ್ರವೇಶಿಸಿ ಧೂಳೀಪಟ ಮಾಡುವಂತೆ ಕೌರವರ ಸೇನಾಜಾಲವನ್ನು ಅಭಿಮನ್ಯುವು ಪ್ರವೇಶಿಸಿ ಕೋಲಾಹಲವನ್ನುಂಟು ಮಾಡಿದನು ಎನ್ನುತ್ತಾನೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಮತ್ಸ್ಯದೇಶದ ವಿರಾಟ ರಾಜನ ಮಗ ಉತ್ತರನು ಗೋಗ್ರಹಣ ಕಾಲದಲ್ಲಿ ಕೌರವರ ಸೈನ್ಯ ಬಂದಿರುವುದನ್ನು ತಿಳಿದು ತನ್ನ ಅಂತಃಪುರದಲ್ಲಿ ಕುಳಿತು ಹೆಣ್ಣು ಮಕ್ಕಳ ಎದುರಿನಲ್ಲಿ ತನ್ನ ಒಣ ಪೌರುಷವನ್ನು ಕೊಚ್ಚಿಕೊಳ್ಳುತ್ತಾ–'ಸಹಸದಿಂದಲೆ ತುರುವ ಮರಳಿಚಿ ತಹೆನು ಬಳಿಕಾ ಕೌರವನ, ನಿರ್ವಹಿಸಲೀವೆನೆ ಸೂರೆಗೊಂಬೆನು ಹಸ್ತಿನಾಪುರವ' ಎನ್ನುತ್ತಾನಲ್ಲದೆ, ತನ್ನ ರಾಜ್ಯದ ಅರಮನೆಯ ಗೋವುಗಳನ್ನು ಸೆರೆಹಿಡಿದ ಕೌರವನಿಗೆ ಪ್ರತೀಕಾರವಾಗಿ 'ಅವರ ಹೆಂಡಿರ ಸೆರೆಯ ತಾರದೆ ಮಾಣೆನು' ಎಂದು ನಾರಿಯರ ಮುಂದೆ ಹೇಳಿಕೊಳ್ಳುತ್ತಾನೆ. ಅಭಿಮನ್ಯು ಮತ್ತು ಉತ್ತರ ಕುಮಾರ ಸಮಾನ ವಯಸ್ಕರು. ಆದರೆ ಅವರಿಬ್ಬರ ಸ್ವಭಾವಗಳು ಒಂದಕ್ಕೊಂದು ವಿರುದ್ಧವಾಗಿವೆ ಕುಮಾರವ್ಯಾಸನ ಲೇಖನಿಯಲ್ಲಿ. ಅಂತೆಯೇ ಭೀಮನೊಂದೆಡೆ ದ್ರೌಪದಿಗೆ ಅಪಮಾನವಾದ ಸಂದರ್ಭದಲ್ಲಿ ಹೀಗೆನ್ನುತ್ತಾನೆ–'ಭೀಮ ಕಷ್ಟವನೆಸಗಿದನು ಹಾ ಎಂದರಾದೊಡೆ, ಮುಸುಡ ನಮರಾದ್ರಿಯಲಿ ತೇವೆನು ದೇವಸಂತತಿಯ' ಎಂಬ ಪೌರುಷದ ಮಾತನ್ನಾಡುತ್ತಾನೆ.

(ಮುಂದುವರಿಯುವುದು)

## ಕವನಗಳು

ಅಕ್ಷರ ಕವನ

### ಕನ್ನಡದ ಕಂದ

**ಕ**ನ್ನಡಮ್ಮನ ಕಾಪಾಡು ಕರ್ನಾಟಕ ರಾಜ್ಯದಲಿ,
**ಕಾ**ವೇರಿನದಿ ಹುಟ್ಟಿ ಹರಿಯುತಿಹಳು ಕನ್ನಡದ ನೆಲದಲ್ಲಿ
**ಕಿ**ರೀಟದ ತೆರನಾಗಿಹುದು ಮೈಸೂರು ನಗರ ಸೊಬಗಿನಲ್ಲಿ,
**ಕೀ**ರ್ತಿ ಪತಾಕೆಯು ಹಾರಾಡುತಿರಲಿ ಕನ್ನಡದ ಬಾನಂಗಳದಲ್ಲಿ,
**ಕು**ಮಾರಧಾರೆಯು ಹರಿದು ಬಂದು ನೇತ್ರಾವತಿಯಲ್ಲಿ,
**ಕೂ**ಡಿ ಸಂಗಮವಾಗುವುದು ದಕ್ಷಿಣಕನ್ನಡದಲ್ಲಿ,
**ಕೃ**ಷ್ಣೆ, ಮಲಪ್ರಭೆ, ಘಟಪ್ರಭೆಗಳು ಕೂಡುವುದು ಉತ್ತರದಲ್ಲಿ
**ಕೆಂ**ಪೇಗೌಡನು ಆಳಿ ಮೆರೆದನು ಬೆಂಗಳೂರು ನಗರದಲ್ಲಿ,
**ಕೇ**ಸರಿ ಹಳದಿ ಬಣ್ಣಗಳು ರಂಜಿಸುತ್ತಿವೆ ಕನ್ನಡದ ಬಾವುಟದಲ್ಲಿ,
**ಕೈ**ಯಾರೆ, ಕುವೆಂಪು, ಕಾರ್ನಾಡು, ಕಾರಂತರು ಕನ್ನಡವ ಮೆರೆಸಿದುಲ್ಲಿ,
**ಕೊಂ**ಕಣದ ವನಸಿರಿಯು ಪಸರಿಸಿದೆ ಪಶ್ಚಿಮದಲ್ಲಿ,
**ಕೋ**ಟೆ ಕೊತ್ತಲಗಳ ತುಂಡರಸರುಗಳು ಆಳಿ ಬಾಳಿದರಿಲ್ಲಿ,
**ಕೌ**ಶಲ್ಯದಾ ಗುಡಿಕೈಗಾರಿಕೆಗಳು ಮೊಳಗುತಿವೆ ಗ್ರಾಮಾಂತರದಲ್ಲಿ,
**ಕಂ**ದ ನೀ ಬೆಳಗು ಕನ್ನಡವನ್ನು ರಾಜ್ಯೋತ್ಸವದಲ್ಲಿ
**ಕಹ**ಳೆಯನು ಊದಿ ಕನ್ನಡವ ಮೆರೆಸು ಜನಮನದಲ್ಲಿ.

**–ಶಂಕರನಾರಾಯಣ ಪೆರುವಾಜೆ, ಬೆಂಗಳೂರು**

### N ATURE

Nature is a wonderful gift of God,
Which is as beautiful as the house of Lord.

In rainy season, we get to see the dancing flowers,
of white, pink, purple and various colours.

In summer, we get to eat a variety of fruits
For which every child waits.

In winter, we get to enjoy the chill weather,
This is the gift for us from our nature mother.

All these are as beautiful as the shining stars,
Which are not found in Jupiter, Venus or Mars.

Earth is a home for all these creations
Which are now being destroyed by man's inventions

-Pragathi Bhandi, Perdoor
10th Std., MJC, Manipal

### ಎತ್ತರಕ್ಕೇರಿದವರಿಗೆ ಸೋಪಾನ

ಎತ್ತರಕ್ಕೇರಿದವರು ಹಿಂದಿರುಗಿ ನೋಡಲಿ
ನಡೆದ ಹೆಜ್ಜೆಗಳು ಗೋಚರಿಸಲಿ
ಪ್ರತಿ ಹೆಜ್ಜೆಯಲಿ ಎಷ್ಟೊಂದು ನೋವು ನಲಿವು
ಅನುಭವಿಸಿದವರಿಗೆ ಗೊತ್ತಿರಲಿ.

ತಿರುಗಿ ನಾ ನೋಡುವುದಿಲ್ಲವೆನ್ನುವವರಿಗೆ
ಏನು ಹೇಳಲು ಸಾಧ್ಯವಿಲ್ಲ
ಮೇಲೇರಿದ ಮೇಲೆ ಭೂತಕಾಲವೇಕೆ
ಎಂದರೆ ಮಂಥನಕೆ ಅವಕಾಶವಿಲ್ಲ

ಕಷ್ಟವನು ಮೆಚ್ಚಿ ಸುಖವನು ಗೆದ್ದವರಿಗೆ
ಹಿಂದಿನ ನೆನಪುಗಳೇ ಸಮ್ಮಾನ
ಕಷ್ಟವನು ಅವಮಾನವೆಂದು ತಿಳಿದವರಿಗೆ
ಹಳೆಯ ನೆನಪುಗಳೇ ದುಮ್ಮಾನ

ಎತ್ತರಕ್ಕೇರಿದವರ ಮನದಲ್ಲಿ ಕೆಲವರಿಗೆ
ಹಳೆಯ ನೆನಪುಗಳೇ ಬೇಕೆನಿಸುವುದಿಲ್ಲ
ಹಳೆಯ ನೆನಪುಗಳಲಿ ಸುಖ ದುಃಖವಿರಲಿ
ಎತ್ತರಕ್ಕೇರಿದವರಿಗೆ ಸೋಪಾನವಾಗಿರಲಿ.

ಮೇಲಕ್ಕೇರಿದವರು ಇನ್ನೂ ಮೇಲಕ್ಕೇರಲಿ
ನಡೆದು ಬಂದ ದಾರಿ ಮರೆಯದಿರಲಿ
ಮನದಲಿ ಹಿಂದಿನ ಹೆಜ್ಜೆಯ ಅನುಭವಗಳು
ಅವಿನಾಭಾವ ಸಂಬಂಧ ಹೊಂದಿರಲಿ.

### ಕಂಬಾರರಿಗೆ ಜ್ಞಾನಪೀಠ ಪ್ರಶಸ್ತಿ

ಕನ್ನಡ ಸಾಹಿತ್ಯಕ್ಕೊಂದು ಮತ್ತೊಂದು ಗರಿ
ಕಂಬಾರರಿಗೆ ಜ್ಞಾನಪೀಠ ಪ್ರಶಸ್ತಿ
ಸಮೃದ್ಧ ಸಾಹಿತ್ಯ ಜ್ಞಾನ ಭಂಡಾರ
ಇದುವೇ ಕನ್ನಡದ ಆಸ್ತಿ

ಭಾರತೀಯ ಭಾಷೆಗಳಲಿ ಕನ್ನಡದ ಹಿರಿಮೆ
ಸರಸ್ವತಿ ಮಾತೆಗೆ ಅಲಂಕಾರ
ನಲ್ವತ್ತೈದನೆಯ ಜ್ಞಾನಪೀಠ ಪ್ರಶಸ್ತಿ
ಲಭಿಸಿದೆ ಕಂಬಾರರಿಗೆ ಪುರಸ್ಕಾರ

ಬಹುಮುಖ ಪ್ರತಿಭೆಯ ಸಾಹಿತಿ
ನಾಟಕ ನಿರ್ದೇಶಕರು ಕಂಬಾರ
ಉತ್ತರ ಕರ್ನಾಟಕದ ದೇಸಿಯ ಸೊಗಡು
ಸಾಹಿತ್ಯದಲಿ ಧ್ವನಿಸಿದೆ ಅಪಾರ

ಜಾನಪದದಲಿ ತಜ್ಞ ಹಾಡಿನಲಿ ಮನೋಜ್ಞ
ಸಮುದಾಯ ಪ್ರಜ್ಞೆಯ ಸಾಕಾರ
ದೇಸಿಯ ಭಾಷೆ ಕಂಬಾರರ ಬರಹ
ಮೊಳಗಿದೆ ಕನ್ನಡದ ಝೇಂಕಾರ

ಕಂಬಾರರ ಕನ್ನಡ ಸಾಹಿತ್ಯ ಸೇವೆ
ಜ್ಞಾನಪೀಠ ಪ್ರಶಸ್ತಿಗೆ ಭಾಜನ
ಆರುಕೋಟಿ ಕನ್ನಡಿಗರ ಸಂತಸ ಸಂಭ್ರಮ
ಕನ್ನಡ ತಾಯಿಗೆ ನಮನ

### ಬಾಪು ಸಿದ್ಧಾಂತ-ಪ್ರಸ್ತುತ

ಇತಿಹಾಸದ ಪುಟದಲಿ ಮರೆಯಾಗಬೇಡಿ
ನಿಮ್ಮ ಸಿದ್ಧಾಂತ ಪ್ರಸ್ತುತ ಬಾಪು
ಫೋಟೋದಲಿ ಕ್ಯಾಲಂಡರುಗಳಲಿ ಕಂಗೊಳಿಸಿ
ಸೀಮಿತವಾಗಬೇಡಿ ಬಾಪು

ಹಿಂಸೆಗೆ ಶಾಂತಿ ಮಂತ್ರವ ಕಲಿಸಿ
ಅಹಿಂಸೆಗೆ ರೂಪವ ಕೊಟ್ಟಿರಿ
ಸತ್ಯಾನ್ವೇಷಣೆಯಲಿ ಸತ್ಯಾಗ್ರಹಕೆ
ಹೊಸ ಭಾಷ್ಯವ ಬರೆದಿರಿ

ನಡೆಯು ಒಂದೇ ನುಡಿಯು ಒಂದೇ
ಬಾಪು ನಿಮ್ಮಯ ಬದುಕು
ಮೇಲು ಕೀಳು ಭೇದ ಅಳಿಸಿದ
ಬಾಪು ನೀವೇ ಚಿರಾಯು

ಸೂರ್ಯ ಮುಳುಗದ ಸಾಮ್ರಾಜ್ಯವೆಂದ
ಬ್ರಿಟಿಷರ ಸೊಕ್ಕನು ಮುರಿದಿರಿ
ಅಂದು-ಇಂದು ಎಂದೆಂದಿಗೂ ನೀವು
ಜನಮನದಲಿ ನೆಲೆಯೂರಿದಿರಿ.

ಉತ್ತಮ ಕೆಲಸವ ಮಾಡಿ ಮನುಜನು
ದೇವರ ಮಟ್ಟಕ್ಕೆ ಏರಲು ಸಾಧ್ಯ
ನಡೆಯಂತೆ ನುಡಿದ ಮಹಾತ್ಮರು ನೀವು
ನಿಮ್ಮಯ ಬದುಕೆ ಧನ್ಯ

**–ಮಾರ್ಪಳ್ಳಿ ಆರ್.ಮಂಜುನಾಥ್, ಶಿವಮೊಗ್ಗ**

ಚುಟುಕಗಳು

### ಔತಣಕೂಟ

ನನ್ನಣ್ಣನ ಮದುವೆಯ ಔತಣ ಕೂಟ
ಎಲ್ಲಿ ನೋಡಿದರಲ್ಲಿ ಬಂಧುಗಳದೇ ಓಡಾಟ
ಬಗೆ ಬಗೆ ಸಿಹಿ ಖಾದ್ಯಗಳ ಸವಿಯೂಟ
ಎಲ್ಲರೊಂದಿಗೂ ಬೆರೆಯುವ ಸುಂದರ ನೋಟ.

### ಕಿಚ್ಚು-ಹುಚ್ಚು

ಬೇಡ, ಪಡಬೇಡ ಅನ್ಯರ ಮೇಲೆ ಕಿಚ್ಚು
ಹಿಡಿಯುವುದು ನಿನಗೆ ಅದುವೆ ಹುಚ್ಚು
ಸಾಕು ಮಾಡು ವ್ಯಂಗ್ಯ ಮಾತುಗಳ ಚುಚ್ಚು
ಒಂದಾಗಿ ಬಾಳಿರಿ ಇದುವೆ ಅಚ್ಚುಮೆಚ್ಚು!

**–ವೈ. ಎ. ರಾವ್**

## ಮಾಂಗಲ್ಯಂ ತಂತುನಾನೇನ ....

ಉಡುಪಿ ಬೈಲೂರಿನ ದಿ| ಸದಾಶಿವ ರಾವ್‌ರವರ ಪುತ್ರ **ರಾಜೇಶ್** ಹಾಗೂ ಕುಂದಾಪುರದ ಶ್ರೀಮತಿ ಮತ್ತು ಶ್ರೀ ಪಿ. ನಾರಾಯಣ ಹೆಬ್ಬಾರ್ ಇವರ ಪುತ್ರಿ **ಸ್ವಾತಿ** ಇವರ ವಿವಾಹವು ತಾ.02-11-2011ರಂದು ಕುಂದಾಪುರ ಶ್ರೀ ಕುಂದೇಶ್ವರ ದೇವಸ್ಥಾನದ ಸಭಾಭವನದಲ್ಲಿ ನೆರವೇರಿತು.

★★★★

ಬರೋಡದಲ್ಲಿರುವ ಶ್ರೀಮತಿ ಮತ್ತು ಶ್ರೀ ಡಾ| ಐ.ಆರ್. ರಾಜ್‌ಕುಮಾರ್ ಇವರ ಪುತ್ರ **ಡಾ| ಪರೀಕ್ಷಿತ್** ಹಾಗೂ ಶ್ರೀಮತಿ ಮತ್ತು ಶ್ರೀ ಎಲ್ಲೂರು ಚಂದ್ರಶೇಖರ ರಾಯರ ಪುತ್ರಿ **ಡಾ| ಪಾಯಲ್** ಇವರ ವಿವಾಹವು ತಾ.04-11-11ರಂದು ಉಡುಪಿ ಕಿದಿಯೂರು ಹೋಟೇಲಿನ ಅನಂತಶಯನ ಹಾಲ್‌ನಲ್ಲಿ ನೆರವೇರಿತು.

★★★★

ಶಿವಮೊಗ್ಗದಲ್ಲಿರುವ ಶ್ರೀಮತಿ ಪುಷ್ಪವಲ್ಲಿ ಮತ್ತು ಶ್ರೀ ಎಮ್.ಆರ್.ಸುಬ್ರಹ್ಮಣ್ಯ ಇವರ ಪುತ್ರ **ಗಿರೀಶ್ ಕುಮಾರ್ ಎಂ.ಎಸ್** ಹಾಗೂ ಶಿವಮೊಗ್ಗ ಮತ್ತೂರು ವಾಸಿ ಶ್ರೀಮತಿ ಭಾಗೀರಥಿ ಮತ್ತು ಸಕೇಶ ಹೆಬ್ಬಾರ್ ಇವರ ಪುತ್ರಿ **ಚೈತ್ರಾ ಹೆಬ್ಬಾರ್ ಜೆ.** ಇವರ ವಿವಾಹವು ತಾ.16-10-2011ರಂದು ಶ್ರೀ ಸರ್ವಸಿದ್ಧಿ ವಿನಾಯಕ ಸ್ವಾಮಿ ಕಲ್ಯಾಣ ಮಂದಿರ, ಶಿವಮೊಗ್ಗ ಇಲ್ಲಿ ನೆರವೇರಿತು.

## ನಿಧನ

### ಕೃಷ್ಣಮೂರ್ತಿ ಶ್ಯಾನುಭಾಗ್

ತಂತ್ರಾಡಿಯ ಕೃಷ್ಣಮೂರ್ತಿ ಶ್ಯಾನುಭಾಗ್ (48 ವರ್ಷ) ಇವರು ತಾ.15-10-2011ರಂದು ಮಂದಾರ್ತಿ ಸಮೀಪ ತಂತ್ರಾಡಿಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ನಿಧನರಾದರು. ಕುಂದಾಪುರ-ಬೆಂಗಳೂರು ನಡುವಣ ಕೆ.ಎಸ್.ಆರ್.ಟಿ.ಸಿ. ಬಸ್‌ನಲ್ಲಿ ನಿರ್ವಾಹಕರಾಗಿ ಸೇವೆ ಸಲ್ಲಿಸುತ್ತಿದ್ದ ಇವರು ಪತ್ನಿ, ಪುತ್ರ, ಪುತ್ರಿಯನ್ನು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

★★★ ★★★

### ಕುಂಜೂರು ಈಶ್ವರ ರಾವ್

ಪಣಿಯೂರು ಶ್ರೀ ದುರ್ಗಾದೇವಿ ಅನುದಾನಿತ ಹಿ.ಪ್ರಾ.ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯ, ನಿವೃತ್ತ ಅಂಚೆ ಪಾಲಕ ಕುಂಜೂರು ಈಶ್ವರ ರಾವ್ (81) ಅಸೌಖ್ಯದಿಂದ ತಾ.18-10-2011ರಂದು ಪಣಿಯೂರಿನ ಸ್ವಗೃಹದಲ್ಲಿ ನಿಧನರಾದರು. ಇವರು ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

## ವೃಶ್ಚಿಕ ಮಾಸದ ವಿಶೇಷ ದಿನಗಳು

| | |
|---|---|
| 17-11-2011 | ವೃಶ್ಚಿಕ ಸಂಕ್ರಮಣ |
| 20-11-2011 | ಅನುರಾಧಾ ನಕ್ಷತ್ರಾರಂಭ |
| 21-11-2011 | ಸರ್ವೇಕಾದಶೀ |
| 22-11-2011 | ಪ್ರದೋಷಃ |
| 25-11-2011 | ಅಮಾವಾಸ್ಯಾ |
| 30-11-2011 | ಸುಬ್ರಹ್ಮಣ್ಯ ಷಷ್ಠೀ |
| 03-12-2011 | ಜೇಷ್ಠಾ ನಕ್ಷತ್ರಾರಂಭ |
| 06-12-2011 | ಸರ್ವೇಕಾದಶೀ |
| 07-12-2011 | ಮುಕ್ಕೋಟಿ ದ್ವಾದಶಿ ಪ್ರದೋಷಃ |
| 10-12-2011 | ಪೂರ್ಣಿಮಾ ಖಗ್ರಾಸ ಚಂದ್ರಗ್ರಹಣ |
| 14-12-2011 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ, ಘಂಟೆ 9-32 |
| 16-12-2011 | ಧನು ಸಂಕ್ರಮಣ ಮೂಲಾ ನಕ್ಷತ್ರಾರಂಭ |

## ಅಭಿನಂದನೆ



### ಕು| ಸಂಪ್ರೀತ ಎಲ್.ರಾವ್

ಉಡುಪಿ ವಿದ್ಯೋದಯ ಪಬ್ಲಿಕ್ ಸ್ಕೂಲಿನ ವಿದ್ಯಾರ್ಥಿನಿ (10ನೇ ತರಗತಿ) ಕು| ಸಂಪ್ರೀತ ಎಲ್.ರಾವ್, ಕರ್ನಾಟಕ ಸರಕಾರ ನಡೆಸುತ್ತಿರುವ 2010-2011ನೇ ಸಾಲಿನ ಸಂಗೀತ ಪರೀಕ್ಷೆಯ ಹಾಡುಗಾರಿಕೆ ಪ್ರಾಥಮಿಕ ಹಂತ ಪರೀಕ್ಷೆಯಲ್ಲಿ ವಿಶಿಷ್ಠ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ. ಇವಳು ಪಿಡಬ್ಲುಡಿ ಇಲಾಖೆಯಲ್ಲಿ ಸೂಪರಿನ್‌ಟೆಂಡೆಂಟ್ ಆಗಿರುವ ಶ್ರೀ ಲಕ್ಷ್ಮೀಕಾಂತ ರಾವ್ ಮತ್ತು ಶ್ರೀಮತಿ ರೇಖಾವತಿ ಲಕ್ಷ್ಮೀಕಾಂತ್ ರಾವ್ ಇವರ ಪುತ್ರಿ ಮತ್ತು 'ಶಾಂತಾಲಯ' ಸಂಗೀತ ಸಂಸ್ಥೆಯ ಶಿಕ್ಷಕ ಕೆ. ಪ್ರಕಾಶ್ ರಾವ್ ಇವರ ಶಿಷ್ಯೆ. ಇವರಿಗೆ ಶ್ರೀಶಾರದಾ ಅಭಿನಂದನೆಗಳು



### ಕು| ದೀಪಿಕಾ ರಾವ್ ಹೊಸ್ಕೋಟೆ

ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ನಡೆಸಿರುವ 2011-12ನೇ ಸಾಲಿನ ಹಿಂದೂಸ್ತಾನಿ ಜೂನಿಯರ್ ಗ್ರೇಡ್ ಸಂಗೀತ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ (79.50%) ಉತ್ತೀರ್ಣರಾಗಿರುತ್ತಾರೆ. ಇವರು ಉಪ್ಪುಂದ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶಿಕ್ಷಕಿಯಾಗಿರುತ್ತಾರೆ. ಹೊಸ್ಕೋಟೆ ಎಚ್.ಆನಂದರಾವ್ ಹಾಗೂ ವಿಜಯಲಕ್ಷ್ಮಿಯವರ ಪುತ್ರಿ. ಇವರು ಬವಲಾಡಿ ಶ್ರೀ ರಾಘವೇಂದ್ರ ಉಪಾಧ್ಯಾಯರಲ್ಲಿ ಸಂಗೀತಾಭ್ಯಾಸವನ್ನು ಮಾಡಿರುತ್ತಾರೆ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು

## ವಿಳಾಸ ಬದಲಾವಣೆ

**ಎಂ. ಮಂಜುನಾಥ ಹೆಬ್ಬಾರ್,** ಅಧ್ಯಾಪಕ, ''ಶ್ರೀದುರ್ಗಾಕೃಪಾ'', ಹೆಬ್ಬಾರ್ ಕಂಪೌಂಡ್, ಬೇಳಂಜೆ-576112, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ, ಮೊಬೈಲ್ : 9972673234

## ವರ್ಗಾವಣೆ

**ಎಂ. ಮಂಜುನಾಥ ಹೆಬ್ಬಾರ್,**

ಅಧ್ಯಾಪಕ, ಇವರು ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಬಂಗಾರಗುಡ್ಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದು ಈಗ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ವಂಡಾರಬೆಟ್ಟು ಚಾರ ಇಲ್ಲಿಗೆ ವರ್ಗಾವಣೆಗೊಂಡು ತಾ.1-10-11 ರಿಂದ ಕರ್ತವ್ಯನಿರ್ವಹಿಸುತ್ತಿದ್ದಾರೆ.

# ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

ಡಾ| ವೈ. ಸುದರ್ಶನ ರಾವ್

**ಪ್ರಶ್ನೆ : ಉಬ್ಬಸ ಖಾಯಿಲೆ (bronchial asthma)ಯ ಕಾರಣಗಳೇನು? ಮತ್ತು ಇದರ ಚಿಕಿತ್ಸೆ ಹೇಗೆ?**

**ಉತ್ತರ :** ನಮ್ಮ ದೇಹಕ್ಕೆ ಆಹಾರ ಮತ್ತು ನೀರಿನ ಅವಶ್ಯಕತೆ ಹೇಗಿದೆಯೋ ಹಾಗೆ ಆಮ್ಲಜನಕವೆಂಬ ಮೂಲವಸ್ತುವೊಂದರ ಅವಶ್ಯಕತೆ ಇದೆ. ಉಸಿರಾಡುವುದರ ಮೂಲಕ ಈ ಆಮ್ಲಜನಕವನ್ನು ವಾತಾವರಣದಲ್ಲಿ ಇರುವ ಗಾಳಿಯಿಂದ ಹೀರಿ ದೇಹಕ್ಕೆ ಸರಬರಾಜು ಮಾಡುವುದು ಶ್ವಾಸಕೋಶಗಳ ಕೆಲಸ. ನಮ್ಮ ದೇಹದ ಎದೆಗೂಡಿನಲ್ಲಿ ಎರಡು ಶ್ವಾಸಕೋಶಗಳಿವೆ. ಎದೆಗೂಡಿನ ಮಾಂಸಖಂಡಗಳು ಬಲೂನಿನಂತಿರುವ ಶ್ವಾಸಕೋಶವನ್ನು ಸಂಕುಚಿಸಿ ವಿಕಸಿಸುವ ಮೂಲಕ ವಾತಾವರಣದ ಗಾಳಿಯನ್ನು ಶ್ವಾಸಕೋಶಕ್ಕೆ ಸೆಳೆಯುತ್ತವೆ ಮತ್ತು ಹೊರಹಾಕುತ್ತವೆ. ಉಸಿರಾಡುವಾಗ ಗಾಳಿಯು ಮುಗಿನ ಹೊಳ್ಳೆಗಳಿಂದ ಗಂಟಲನ್ನು ಪ್ರವೇಶುತ್ತದೆ. ಅಲ್ಲಿಂದ ಧ್ವನಿಪೆಟ್ಟಿಗೆಯ ಮುಖಾಂತರ ಹಾದು ಟ್ರೇಕಿಯಾ ಎಂಬ ನಾಳವನ್ನು ಪ್ರವೇಶಿಸುತ್ತದೆ. ಟ್ರೇಕಿಯಾವು ಮುಂದೆ ಬ್ರಾಂಕಸ್ ಎಂಬ ಎರಡು ನಳಿಕೆಗಳಾಗಿ ವಿಭಜಿಸಿಕೊಳ್ಳುತ್ತದೆ. ಈ ಬ್ರಾಂಕಸ್ ನಾಳದ ಮೂಲಕ ಗಾಳಿಯು ಟ್ರೇಕಿಯಾದಿಂದ ಶ್ವಾಸಕೋಶಗಳಿಗೆ ಹೋಗುತ್ತದೆ. ಶ್ವಾಸಕೋಶದೊಳಗೆ ಈ ಬ್ರಾಂಕಸ್ ಇನ್ನಷ್ಟು ಸಣ್ಣ ನಳಿಕೆಗಳಾಗಿ ವಿಭಜನೆಯಾಗುತ್ತದೆ. ಶ್ವಾಸಕೋಶದಲ್ಲಿ ಗಾಳಿಯು ಪ್ರವೇಶಿಸುವ ಕೊನೆಯ ಭಾಗವನ್ನು ಅಲ್ವಿಯೊಮೈ ಎಂದು ಕರೆಯುವರು. ಅಲ್ವಿಯೋಲೈನಿಂದ ಆಮ್ಲಜನಕವು ರಕ್ತಕ್ಕೆ ವರ್ಗಾವಣೆಯಾಗುತ್ತದೆ. ಶ್ವಾಸನಾಳವು ಮದ್ವಸ್ತಿ ಮತ್ತು ಮಾಂಸಖಂಡಗಳಿಂದ ಮಾಡಲ್ಪಟ್ಟಿದೆ. ಈ ಶ್ವಾಸನಾಳದ ಮಾಂಸಖಂಡಗಳು ಸಂಕುಚಿಸಿ ಹಾಗೂ ವಿಕಸಿಸಿ ಈ ನಾಳದ ವ್ಯಾಸವನ್ನು ಕುಗ್ಗುವಂತೆ ಅಥವಾ ಹಿಗ್ಗುವಂತೆ ಮಾಡಬಲ್ಲವು. ಬೆಚ್ಚನೆಯ ಮತ್ತು ಶುದ್ಧ ಗಾಳಿಯು ಮಾತ್ರ ಶ್ವಾಸಕೋಶವನ್ನು ಪ್ರವೇಶಿಸುವಂತೆ ಮಾಡುವುದು ಈ ನಾಳದ ವ್ಯಾಸ ಹಿಗ್ಗುವುದು ಮತ್ತು ಕುಗ್ಗುವುದರ ಹಿಂದಿನ ಉದ್ದೇಶವಾಗಿದೆ. ಮೂಗಿನ ಹೊಳ್ಳೆಯಲ್ಲಿರುವ ಕೂದಲು ಮತ್ತು ಸಿಲಿಯಾಗಳೆಂಬ ಸೂಕ್ಷ್ಮದರ್ಶಕಕ್ಕೆ ಮಾತ್ರ ಕಾಣಿಸುವ ರಚನೆಗಳು ಮತ್ತು ಮೂಗು ಮತ್ತು ಗಂಟಲು ಮತ್ತು ಟ್ರೇಕಿಯಾದಿಂದ ಸ್ರವಿಸುವ ಸ್ರಾವ (ಸಿಂಬಳ ಮತ್ತು ಕಫ) ಇವುಗಳು ಗಾಳಿಯಲ್ಲಿರುವ ಧೂಳು ಹಾಗೂ ಪರಕೀಯ ವಸ್ತು/ಜೀವಿಗಳನ್ನು ಸೋಸಿ ಶುದ್ಧ ಗಾಳಿಯನ್ನು ಮಾತ್ರ ಶ್ವಾಸಕೋಶಕ್ಕೆ ತಲುಪುವಂತೆ ಮಾಡುತ್ತವೆ. ಕೆಮ್ಮು ಮತ್ತು ಸೀನು ಇಂತಹಾ ವಸ್ತುಗಳನ್ನು ಶ್ವಾಸಕೊಶದಿಂದ ಹೊರದೂಡಲು ಇರುವ ವ್ಯವಸ್ಥೆಯಾಗಿದೆ. ಉಸಿರಾಡುವ ಗಾಳಿ, ಧೂಳು, ಹೊಗೆ ಇತ್ಯಾದಿಗಳಿಂದ ಕಲುಷಿತವಾಗಿದ್ದರೆ, ತುಂಬಾ ತಂಪಾಗಿದ್ದರೆ ಇಂತಹಾ ಗಾಳಿ ಶುದ್ಧವಾಗಲು ಮೂಗು ಮತ್ತು ಶ್ವಾಸನಾಳದಲ್ಲಿ ಸಿಂಬಳ ಮತ್ತು ಕಫ ಸ್ರವಿಸುತ್ತದೆ. ಆಗ ಗಾಳಿಯಲ್ಲಿರುವ ಧೂಳು ಈ ಸ್ರಾವಕ್ಕೆ ಅಂಟಿಕೊಂಡು ಗಾಳಿ ಶುದ್ಧವಾಗುತ್ತದೆ. ಈ ಕೆಲಸಕ್ಕೆ ಅನುಕೂಲವಾಗುವಂತೆ ಗಾಳಿಯು ನಿಧಾನವಾಗಿ ಚಲಿಸಲು ಶ್ವಾಸನಾಳದ ಮಾಂಸಖಂಡಗಳು ಸಂಕುಚಿಸಿದಾಗ ಅದರ ವ್ಯಾಸವು ಕುಗ್ಗುತ್ತದೆ.

ಉಬ್ಬಸ ಕಾಯಿಲೆಯಲ್ಲಿ ದೇಹವು ಮೇಲೆ ಹೇಳಿದ ಪರಿಸ್ಥಿತಿಗೆ ಒಡ್ಡಿಕೊಂಡಾಗ ಶ್ವಾಸನಾಳದ ಮಾಂಸಖಂಡಗಳು ವಿಪರೀತವಾಗಿ ಸಂಕುಚಿಸಿ ನಾಳದ ವ್ಯಾಸವನ್ನು ತುಂಬಾ ಕಿರಿದು ಮಾಡುವುದರಿಂದ ಉಸಿರಾಡಲು ಅದರಲ್ಲೂ ಉಸಿರನ್ನು ಹೊರಹಾಕಲು ಕಷ್ಟವಾಗುವುದು. ಅಗಲ ಕಿರಿದಾದ ನಾಳದಲ್ಲಿ ಉಸಿರನ್ನು ಒತ್ತಡದಿಂದ ಹೊರದೂಡುವಾಗ ಕುಂಯ್ ಎಂಬ ಶಬ್ದ ಕೇಳಿಸುತ್ತದೆ. ಇದನ್ನು ವೀಜಿಂಗ್ ಎಂದು ಕರೆಯುತ್ತಾರೆ. ಸತತವಾಗಿ, ಉಸಿರಾಡಲು ಪುರುಸೊತ್ತು ನೀಡದಂತೆ (ದಮ್ಮುಕಟ್ಟುವಂತೆ) ಬರುವ ಕೆಮ್ಮು ಇನ್ನೊಂದು ಚಿಹ್ನೆ. ಮೇಲೆ ಹೇಳಿದ ಯಾವುದೇ ಪರಿಸ್ಥಿತಿಯಲ್ಲಿ ಉಬ್ಬಸರೋಗಿಗಳ ಶ್ವಾಸನಾಳಗಳು ಇತರರ ಶ್ವಾಸನಾಳಗಳಿಗಿಂತ ಅಧಿಕವಾಗಿ ಪ್ರತಿಕ್ರಿಯೆ ನೀಡುವುದು ಉಬ್ಬಸ ಕಾಯಿಲೆಯ ಮೂಲ ಕಾರಣ.

ಹೆಚ್ಚಿನ ರೋಗಿಗಳಿಗೆ ಈ ರೀತಿ ಶ್ವಾಸನಾಳಗಳು ಸಂಕುಚಿತವಾಗಿ ಉಸಿರಾಡಲು ಕಷ್ಟವಾಗುವ ತೊಂದರೆ ಧೂಳು, ಹೊಗೆ ಮಿಶ್ರಿತ ಗಾಳಿ ಸೇವನೆಯಿಂದ, ಪೇಂಯ್ಟ್ (paint)ನಂತಹ ರಾಸಾಯನಿಕದ ವಾಸನೆ, ತಂಗಾಳಿಗೆ ಮೈ ಒಡ್ಡಿಕೊಳ್ಳುವುದು, ಹಾಲು, ಚಾಕೋಲೇಟು, ಮೊಟ್ಟೆ ಬೀಜ, ಮೀನು, ಟೊಮೆಟೊ ಮತ್ತು ಕೆಲವು ಹಣ್ಣುಗಳ ಸೇವನೆ, ಅತಿಯಾಗಿ ನಗುವುದು, ಅತಿಯಾದ ವ್ಯಾಯಾಮ ಮತ್ತು ಕೆಲವು ಔಷಧಿಯ ಪರಿಣಾಮದಿಂದಾಗಿ ಆಗುತ್ತದೆ. ಇನ್ನು ಕೆಲವೊಮ್ಮೆ ನೆಗಡಿ ಮತ್ತು ಮೂಗಿನ ಕಾಯಿಲೆಯಿದ್ದರೆ ಉಬ್ಬಸದ ತೊಂದರೆ ಪದೇ ಪದೇ ಆಗುವುದುಂಟು.

ಉಬ್ಬಸ ಕಾಯಿಲೆ ಆರು ತಿಂಗಳು ಪ್ರಾಯದ ಮಗುವಿನಿಂದ ಹಿಡಿದು ವೃದ್ಧರ ತನಕ ಯಾರಿಗೂ ಕಾಡಬಹುದು. ಆದರೆ ಹೆಚ್ಚಿನ ರೋಗಿಗಳಿಗೆ ಇದು ಅನುವಂಶಿಕವಾಗಿ ಬರುತ್ತದೆ. ಸಣ್ಣ ಪ್ರಾಯದಲ್ಲಿ ಈ ತೊಂದರೆಯಿದ್ದರೆ ಅದು ಈ ರೀತಿ ಬಂದಿರುವ ಸಾಧ್ಯತೆ ಹೆಚ್ಚು.

ನ್ಯುಮೋನಿಯಾ, ಬ್ರಾಂಕೈಟಿಸ್‌ನಂತಹಾ ಶ್ವಾಸಕೋಶದ ಖಾಯಿಲೆಗಳು, ಹೃದಯದ ಖಾಯಿಲೆಗಳು, ಕಿಡ್ನಿ ವೈಫಲ್ಯ, ರಕ್ತಹೀನತೆ ಇತ್ಯಾದಿ ಅನೇಕ ಕಾಯಿಲೆಗಳು ಉಬ್ಬಸದಂತೆ ಕಾಣಬಹುದು. ಸೂಕ್ತ ವೈದ್ಯಕೀಯ ತಪಾಸಣೆಯ ಮೂಲಕ ಈ ಖಾಯಿಲೆ ಹೌದು ಎಂದು ಖಚಿತಪಡಿಸಿಕೊಂಡು ಚಿಕಿತ್ಸೆ ನಡೆಸಬೇಕು.

ವಿವಿಧ ರೀತಿಯ ಮಾತ್ರೆಗಳು, ಸಿರಪುಗಳು, ಇಂಜೆಕ್ಷನ್‌ಗಳು ಹಾಗೂ ಉಸಿರಿನ ಮೂಲಕ ಶ್ವಾಸಕೋಶಕ್ಕೆ ಔಷಧಿಯನ್ನು ತಲುಪಿಸುವ ಚಿಕಿತ್ಸೆಗಳು ಲಭ್ಯವಿವೆ. ವೈದ್ಯರ ಸಲಹೆಯಂತೆ ಚಿಕಿತ್ಸೆ ನಡೆಸಿದರೆ ಈ ಖಾಯಿಲೆಯನ್ನು ಹತೋಟಿಯಲ್ಲಿಟ್ಟಿರಬಹುದು. ಆದರೂ ಈ ಕಾಯಿಲೆ ಆವಾಗಾವಾಗ ಮರುಕಳಿಸುವ ಸಾಧ್ಯತೆ ಇದೆ.

ಉಬ್ಬಸ ಕಾಯಿಲೆ ಇರುವವರು ಪೌಷ್ಟಿಕ ಆಹಾರ ಸೇವಿಸಬೇಕು. ಚಳಿ, ಹೊಗೆ, ಧೂಳು, ವಾಸನೆಗಳಿಂದ ದೂರವಿರಬೇಕು. ಅತಿಯಾದ ದೈಹಿಕ ಶ್ರಮ, ಮಾನಸಿಕ ಒತ್ತಡ ಸಲ್ಲದು. ತಮಗೆ ಅಲರ್ಜಿ ಇರಬಹುದಾದ ಆಹಾರ ಪದಾರ್ಥ ಮತ್ತು ಔಷಧಿಗಳನ್ನು ನೆನಪಿಟ್ಟುಕೊಂಡು ಅವುಗಳನ್ನು ಸೇವಿಸಬಾರದು. ಸಾಕು ಪ್ರಾಣಿಗಳ ಚರ್ಮದಲ್ಲಿರುವ ಫಂಗಸ್‌ನಿಂದಲೂ ಉಬ್ಬಸ ಆರಂಭವಾಗಬಹುದಾದ್ದರಿಂದ ಅವುಗಳಿಂದ ದೂರವಿರಬೇಕು. ನೆಗಡಿಯಂತಹಾ ಸಣ್ಣ ಕಾಯಿಲೆಗಳನ್ನು ನಿರ್ಲಕ್ಷಿಸದೆ ತಕ್ಷಣ ಚಿಕಿತ್ಸೆ ಮಾಡಬೇಕು. ಈ ಉಪಕ್ರಮಗಳು ಉಬ್ಬಸ ಪದೇ ಪದೇ ಮರುಕಳಿಸದಿರಲು ಸಹಾಯ ಮಾಡುತ್ತವೆ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322**

# ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ

**ಪಾವಂಜೆ, ಹಳೆಯಂಗಡಿ - 574 146, ದ.ಕ.**

ಆತ್ಮೀಯರೇ

ಸ್ವಸ್ತಿ ಶ್ರೀಮತ್ ಪರಮಹಂಸ ಪರಿವ್ರಾಜಕಾಚಾರ್ಯವರ್ಯೇತ್ಯಾದಿ
ಸಮಸ್ತ ಬಿರುದಾವಲೀ ವಿರಾಜಮಾನರಾದ ದಕ್ಷಿಣಾಮ್ನಾಯ
ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ

**ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ**
**ಮಹಾಸನ್ನಿಧಾನಂಗಳವರ ಪರಮಾನುಗ್ರಹದಿಂದ**

ಶ್ರೀ ಖರ ನಾಮ ಸಂವತ್ಸರದ ಮಾರ್ಗಶಿರ ಶುದ್ಧ ಚತುರ್ಥಿಯಿಂದ ಷಷ್ಠಿಯವರೆಗೆ ದಿನಾಂಕ 28-11-2011ನೇ ಸೋಮವಾರದಿಂದ ದಿನಾಂಕ 30-11-2011ನೇ ಬುಧವಾರದವರೆಗೆ

## ಚಂಪಾಷಷ್ಠಿ ಮಹೋತ್ಸವವು

ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದಲ್ಲಿ ಕಾರ್ಯಕ್ರಮದಲ್ಲಿ ನಮೂದಿಸಿದಂತೆ ಜರಗಲಿರುವುದು.

ಈ ಮಹೋತ್ಸವಕ್ಕೆ ತಾವೆಲ್ಲರೂ ಬಂದು ಉತ್ಸವಾದಿಗಳಲ್ಲಿ ಭಾಗವಹಿಸಿ, ಶ್ರೀ ದೇವರ ಮೂಲ ಮೃತ್ತಿಕಾ ಗಂಧ ಪ್ರಸಾದವನ್ನು ಸ್ವೀಕರಿಸಿ, ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

**ಯಂ. ಶಶೀಂದ್ರ ಕುಮಾರ್**
ಆಡಳಿತ ಮೊಕ್ತೇಸರರು

**ಡಾ| ಯಾಜಿ ಎಚ್.ನಿರಂಜನ ಭಟ್**
ಧರ್ಮದರ್ಶಿಗಳು

**ಎರ್ಮಾಳು ರಾಮಚಂದ್ರ ರಾವ್ ; ಶುಂಠಿಪಾಡಿ ಸದಾನಂದ ರಾವ್ ; ಸ್ಕಂದ ಸ್ವಾಮಿ ಮುಕ್ಕ**
ಮೊಕ್ತೇಸರರು

**ಪ್ರತಿ ವರ್ಷದಂತೆ ಕಿರುಷಷ್ಠಿ ಉತ್ಸವವು ತಾ.30-12-2011ರಂದು ಶುಕ್ರವಾರ ಜರಗಲಿದೆ.**

**ತಾ.25-11-2011ರಿಂದ 01-12-2011ರ ವರೆಗೆ ಶ್ರೀ ರಾಮಚಂದ್ರ ಕೃಪಾಪೋಷಿತ ಯಕ್ಷಗಾನ ಮಂಡಳಿ, ರಾಮಚಂದ್ರಾಪುರ-ಹೊಸನಗರ ಇವರಿಂದ ಯಕ್ಷಗಾನ ಬಯಲಾಟ ಸಪ್ತಾಹ. ಪ್ರತಿ ನಿತ್ಯ ಸಂಜೆ 6-00ರಿಂದ 11-00ರ ವರೆಗೆ ಈ ಕೆಳಗಿನ ಪೌರಾಣಿಕ ಪ್ರಸಂಗಗಳನ್ನು ಆಡಿ ತೋರಿಸಲಿದ್ದಾರೆ.**

| | |
|---|---|
| ತಾ.25-11-2011 | ಯಜ್ಞಸಂರಕ್ಷಣೆ-ಸೀತಾಕಲ್ಯಾಣ-ಶ್ರೀರಾಮ ವನಾಗಮನ |
| ತಾ.26-11-2011 | ಭರತಾಗಮನ-ಪಂಚವಟಿ-ಸೀತಾಪಹಾರ |
| ತಾ.27-11-2011 | ವಾಲಿ ವಧೆ-ಲಂಕಾದಹನ-ಸೇತುಬಂಧ |
| ತಾ.28-11-2011 | ನಾಗಾಸ್ತ್ರ-ಕುಂಭಕರ್ಣ-ಅತಿಕಾಯ |
| ತಾ.29-11-2011 | ಮಕರಾಕ್ಷ-ಇಂದ್ರಜಿತು-ತರಣಿಸೇನಾ |
| ತಾ.30-11-2011 | ಮೈರಾವಣ-ರಾವಣ ವಧೆ-ನಿಜಪಟ್ಟಾಭಿಷೇಕ |
| ತಾ.01-12-2011 | ಮಹಾಋಷಿ ಅಗಸ್ತ್ಯ |

ತಾ.30-11-2011ನೇ ಬುಧವಾರ ಸನ್ಮಾನ ಸಮಾರಂಭ ಸಂಜೆ ಗಂಟೆ 5-00ರಿಂದ
ಸನ್ಮಾನಗೊಳ್ಳಲಿರುವವರು :

**ನೀಲಾವರ ಶ್ರೀ ಲಕ್ಷ್ಮೀನಾರಾಯಣ ರಾವ್,** ರಾಜ್ಯೋತ್ಸವಪ್ರಶಸ್ತಿ ವಿಜೇತ ನಿವೃತ್ತ ಶಿಕ್ಷಕರು
ಹಾಗೂ
**ಎ.ಪಿ.ಯಶವಂತ ಶರ್ಮ,** ನಿವೃತ್ತ ಅಭಿವೃದ್ಧಿ ಅಧಿಕಾರಿ, ಬೆಂಗಳೂರು

# ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

## ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | |
|---|---|
| ಮಂಗಳಾರತಿ : | ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ: | **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ |
| ಪ್ರತಿ ಬುಧವಾರ : | **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ : | **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ : | ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.14-12-2011) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

2ನೇ ಶನಿವಾರ : **ತಾ.10-12-2011 ''ಗಮಕವಾಚನ'' ಸಂಜೆ ಗಂಟೆ 5-00ರಿಂದ (ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಬಾರ್ಕೂರು ನಾಗೇಶ ರಾವ್‌ರವರಿಂದ)**

**ತಾ.30-11-2011 ಪಂಚಮಿ ಷಷ್ಠಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.27-11-2011 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**


**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

# ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

**ಶಾರದಾ ನಗರ, ಕುಂಜಿಬೆಟ್ಟು, ಉಡುಪಿ.**

ನಮ್ಮ ಸಮಾಜದ 106 ವಿದ್ಯಾರ್ಥಿಗಳಿಗೆ ರೂ.77,750/- ವಿದ್ಯಾರ್ಥಿ ವೇತನವನ್ನು ಸಂಘದ ವತಿಯಿಂದ ಈ ಬಾರಿ ನೀಡಲಾಗಿದೆ. ಇದರಲ್ಲಿ 41 ಪಿಯುಸಿ ವಿದ್ಯಾರ್ಥಿಗಳಿಗೆ ರೂ.20,500/-, 31 ಗ್ರಾಜುವೇಟ್ ವಿದ್ಯಾರ್ಥಿಗಳಿಗೆ ರೂ.23,250/- ಹಾಗೂ 34 ಪೋಸ್ಟ್ ಗ್ರಾಜುವೇಟ್/ಇಂಜಿನಿಯರಿಂಗ್/ಮೆಡಿಕಲ್‌ನ ವಿದ್ಯಾರ್ಥಿಗಳಿಗೆ ರೂ.34,000/- ಸೇರಿರುತ್ತದೆ.

**- ಕಾರ್ಯದರ್ಶಿ**

Prop. :ADARSH RAO


**ಎಮ್. ದೇವಾನಂದ್ ಭಟ್**
Cell :9845644556

ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಉತ್ತಮ ಗುಣಮಟ್ಟದ ಫೋಟೋಗ್ರಾಫಿಗಾಗಿ ಸಂಪರ್ಕಿಸಿರಿ



**ಬೆಳ್ವಾಯಿ-574213**
(08258)-276177 (O), (918258)-324133 (O), 276777 (R)
ಎಡಪದವು - **574 164** (0824)-256374 (O) ಮಂಗಳೂರು, ದ.ಕ.



**RAJESH POWER PRESS**
PRINTERS & PUBLISHERS
DARBE, PUTTUR, DA. KA. -574 202.
KARNATAKA STATE, SOUTH INDIA.
Ph :(08251) 231696, 231697 & 322386
E-mail :msraghunathrao@hotmail.com
**QUALITY FIRST AND ALWAYS**

**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)


Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Gurushree Building, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org